ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 22 ಆಗಸ್ಟ್ 12, 1979 40 ಪೈಸೆ

ಸಂಪಾದಕೀಯ

ಆಗಸ್ಟ್ 15

ಆಗಸ್ಟ್ 15 ಭಾರತದ ಜನತೆಯ ಅತ್ಯಂತ ಚಾರಿತ್ರಿಕ ದಿನ. ಆಗಸ್ಟ್ 15, 1947ರಂದು ಬ್ರಿಟೀಷ್ ಸಾಮ್ರಾಜ್ಯಶಾಹಿಯ ಗುಲಾಮಗಿರಿ ಅಂತ್ಯಗೊಂಡು ಭಾರತ ಸ್ವಾತಂತ್ರ್ಯ ಗಳಿಸಿದ ಸ್ಮರಣೀಯ ದಿನ. ಅಂದು ಜನತೆ ಸಂತೋಷದಿಂದ ಬಹಳ ವಿಜೃಂಭಣೆಯಿಂದ ಆಚರಿಸಿತು. ಇನ್ನು ಮುಂದೆ ನಮ್ಮ ಬಡತನ, ದಾರಿದ್ರ್ಯಗಳೆಲ್ಲ ಅಂತ್ಯವಾಗಿ ಸುಖ ಸಮೃದ್ಧಿಯ ಹೊಸ ಬಾಳನ್ನು ಕಟ್ಟುವ ಕನಸನ್ನು ಕಂಡಿತು. 200 ವರ್ಷಗಳ ಬ್ರಿಟೀಷರ ಸುಲಿಗೆಯು ಕೊನೆಗೊಂಡು ನಮ್ಮ ದೇಶದ ಅಪಾರ ಸಂಪತ್ತನ್ನು ನಾವೇ ಬೆಳೆಸಿ ಅನುಭವಿಸುವೆವೆಂಬ ಆಕಾಂಕ್ಷೆಯಿಂದ ಜನ ಸಂತೋಷದಿಂದ ನಲಿದಾಡಿತು.

ಸ್ವಾತಂತ್ರ್ಯ ಬಂದು ಈಗ 32 ವರ್ಷಗಳಾದವು. ಈಗ 33ನೇ ಸ್ವಾತಂತ್ರ್ಯ ದಿನವನ್ನಾಚರಿಸುತ್ತಿದ್ದೇವೆ. ಮಾಮೂಲಿನ ಸಭೆ ಮೆರವಣಿಗೆಗಳು ನಡೆಯಲಿವೆ. ಆದರೆ ಜನತೆಯಲ್ಲಿ ಹಿಂದಿನ ಉತ್ಸಾಹ ಮಾತ್ರ ಇಲ್ಲ ಅದಕ್ಕೆ ಕಾರಣವೇನು ?

ಆರ್ಥಿಕ ಬಿಕ್ಕಟ್ಟು ಆಳವಾದಂತೆಲ್ಲ, ಜನತೆಯ ಪ್ರತಿಭಟನಾ ಹೋರಾಟ ತೀವ್ರವಾಗುತ್ತಾ ಹೋಯಿತು. ಇದೇ ಸಂದರ್ಭದಲ್ಲಿ ತನ್ನ ಅಧಿಕಾರ ಗದ್ದುಗೆಯನ್ನುಳಿಸಿಕೊಳ್ಳಲು ಆಗಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು 1978ರ ಜೂನ್‌ನಲ್ಲಿ ತುರ್ತುಪರಿಸ್ಥಿತಿಯನ್ನು ಜಾರಿಮಾಡಿ, ಪ್ರಜಾಪ್ರಭುತ್ವದ ಕೊಲೆ ಮಾಡಿದರು. ಇದರ ವಿರುದ್ಧ ಸಾರ್ವತ್ರಿಕ ಹೋರಾಟ ನಡೆಯಿತು. 1977ರ ಮಾರ್ಚಿ ತಿಂಗಳಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಇಂದಿರಾ ಗಾಂಧಿ ಕಾಂಗ್ರೆಸ್ ಪರಾಜಯಗೊಂಡು, 30 ವರ್ಷಗಳ ಕಾಂಗ್ರೆಸ್ ಆಡಳಿತೆ ಕೊನೆಗೊಂಡಿತು. ನಂತರ 2 ವರ್ಷ ಜನತಾ ಪಕ್ಷದ ಆಡಳಿತೆಯಾಯಿತು. ಈ ಅವಧಿಯಲ್ಲಿ ದೇಶದಲ್ಲಾದ ಬದಲಾವಣೆಗಳೇನು ?

ಬ್ರಿಟೀಷರ ಗುಲಾಮಗಿರಿ ಕೊನೆಗೊಂಡರೂ ನಮ್ಮ ದೇಶದಲ್ಲಿ ವಿದೇಶಿ ಬಂಡವಾಳ ಮಿತಿಮೀರಿ ಹೆಚ್ಚಾಗಿದೆ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಸುಲಿಗೆಯೂ ಜಾಸ್ತಿಯಾಗಿದೆ. ಇದರಿಂದ ಸಾಮ್ರಾಜ್ಯಶಾಹಿಗಳ ಕೈವಾಡ ಮತ್ತು ಸುಲಿಗೆ ನಮ್ಮ ದೇಶದಲ್ಲಿ ಮುಂದುವರಿಯುತ್ತಿರುವುದಲ್ಲದೆ ಇದರಿಂದ ನಮ್ಮ ಅಭಿವೃದ್ಧಿಗೂ ಸ್ವಾತಂತ್ರ್ಯಕ್ಕೂ ಅಪಾಯ ಹೆಚ್ಚುತ್ತಿದೆ. ಈ ವಿದೇಶಿ ಅವಲಂಬನೆಯನ್ನು ಅಂತ್ಯಗೊಳಿಸುವ ಪ್ರತಿಜ್ಞೆಯನ್ನು ನಾವಿಂದು ಮಾಡಬೇಕಾಗಿದೆ.

ಈ ಕಾಲಾವಧಿಯಲ್ಲಿ ಸಾರ್ವಜನಿಕ ಕ್ಷೇತ್ರದಲ್ಲೂ, ಖಾಸಗಿ ಕ್ಷೇತ್ರದಲ್ಲೂ ಕೈಗಾರಿಕೆಗಳು ಬೆಳೆಯುತ್ತಾ ಬಂದಿದೆ. ನೀರಾವರಿ ಮತ್ತಿತರ ಯೋಜನೆಗಳೂ ನಡೆದಿವೆ. ಆದರೆ ಜನತೆಯ ಜೀವನ ಮಟ್ಟ ಇಳಿಮುಖವಾಗುತ್ತಿದೆ. ನಿರುದ್ಯೋಗ ತಾಂಡವವಾಡುತ್ತಿದೆ. ಬೆಲೆಗಳು ಏರುತ್ತಿವೆ. ಹಣದುಬ್ಬರ, ನಿತ್ಯೋಪಯೋಗಿವಸ್ತುಗಳ ಅಭಾವ (ಉದಾ: ಸೀಮೆ ಎಣ್ಣೆ) ಮುಂತಾದುವು

[ಕಡೆಯ ಪುಟ ನೋಡಿ]

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡ

ಕಾಂ. ಕೆ. ಈಶ್ವರರೆಡ್ಡಿಯವರ ಕಗ್ಗೊಲೆ

ಕರ್ನೂಲು ಜಿಲ್ಲೆ ಜಮೀನುದಾರರ ಅನೇಕ ದಾಳಿ, ದಬ್ಬಾಳಿಕೆಗಳನ್ನು ಎದುರಿಸಿ, ಕೊನೆಯವರೆಗೂ ಜನತೆಯ ಹೋರಾಟಕ್ಕೆ ಪಣತೊಟ್ಟಿದ್ದ, ಜನಪ್ರಿಯ ಕಮ್ಯುನಿಸ್ಟ್ ಮುಖಂಡ ಕಾಂ. ಕೆ. ಈಶ್ವರರೆಡ್ಡಿಯವರು ಆಗಸ್ಟ್ 4 ರಂದು ಹುತಾತ್ಮರಾದರು. 1964ರಲ್ಲಿ ಪಕ್ಷ ಇಬ್ಭಾಗವಾದಾಗ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದೊಂದಿಗೆ ನಿಂತ ಅವರು 1967ರಲ್ಲಿ ಪೆಟ್ಟಿಕೊಂಡ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು. 1978ರಲ್ಲಿಯೂ ಇದೇ ಕ್ಷೇತ್ರದಿಂದ ವಿಧಾನಸಭಾ ಕ್ಷೇತ್ರಕ್ಕೆ ಅವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಆದರೆ ಇಂದಿರಾ ಕಾಂಗ್ರೆಸ್ಸಿನ ನರಸಪ್ಪನವರು ಸ್ಥಾನ ಪಡೆಯುವಲ್ಲಿ ಯಶಸ್ವಿಯಾದರು.

ಕಾಂ. ಈಶ್ವರರೆಡ್ಡಿಯವರ ಅಭ್ಯರ್ಥಿತನ ಪ್ರಕಟವಾದ ಕೂಡಲೇ, 20 ನೇ ಜನವರಿ 1978ರಂದು, ಆಸಕ್ತ ರಾಜಕೀಯ ಶಕ್ತಿಗಳ ಆದೇಶದಂತೆ ಸುಪ್ರಸಿದ್ಧ ಮಟಕಾಗ್ಯಾಂಗಿನ ರೌಡಿಗಳು ಅವರನ್ನು ತಿವಿದು ಸಾಯಿಸಲು ಪ್ರಯತ್ನಿಸಿದ್ದರು. ದುಡಿಯುವ ಜನತೆಯ ಮುಂದಾಳನ್ನು ಭೂಮಿಯಮೇಲೆ ಇಲ್ಲದಂತೆ ಮಾಡಲು ಆಳುವ ವರ್ಗದ ಏಜೆಂಟರು ಮಾಡಿದ ಅನೇಕ ಪಿತೂರಿಗಳಲ್ಲಿ ಇದೊಂದು. ಸಮಾಜದ ದುಷ್ಟ ಶಕ್ತಿಗಳ ವಿರುದ್ಧ ಚಳುವಳಿಯ ನೇತೃತ್ವ ವಹಿಸಿದ್ದೆ ಇದಕ್ಕೆ ಕಾರಣ.

ಇದಾದ ನಂತರ, ಅನೇಕ ಬಾರಿ ಅವರ ಮೇಲೆ ಹಲ್ಲೆ ನಡೆಸಲು ಪ್ರಯತ್ನಿಸಿದ ಗ್ಯಾಂಗಿನವರು ನಿರಾಶರಾಗಿದ್ದರು ಈ ಬಾರಿ, ಶಸ್ತ್ರಾಸ್ತ್ರಗಳನ್ನು ಹಿಡಿದ ಪುಂಡರ ಗುಂಪು ಕಾಂ. ಈಶ್ವರರೆಡ್ಡಿಯವರು ಪ್ರಯಾಣ ಮಾಡುತ್ತಿದ್ದ ಬಸ್ಸನ್ನು ತಡೆಹಿಡಿದು, ಅವರನ್ನು ಬಸ್ಸಿನಿಂದ ಹೊರಕ್ಕೆಳೆದರು. ಹಾಡುಹಗಲಲ್ಲಿ, ಸೂರ್ಯನ ಉಜ್ವಲ ಪ್ರಕಾಶದಲ್ಲಿ ಅವರನ್ನು ಕ್ರೂರವಾಗಿ ಕೊಲೆ ಮಾಡಲಾಯಿತು.

ಆದರೆ, ಆಶ್ಚರ್ಯಕರವಾದ ವಿಷಯವೆಂದರೆ, ಆಂಧ್ರಪ್ರದೇಶ ಸರಕಾರ ಇದುವರೆಗೂ ಕೊಲೆಸಂಬಂಧದಲ್ಲಿಯಾರನ್ನೂ ಬಂಧಿಸಿಲ್ಲ. ಬಡವರನ್ನು ಉದ್ಧಾರ ಮಾಡುವವರೆಂದು ಹೇಳಿಕೊಳ್ಳುವ, ಇಂದಿರಾ ಕಾಂಗ್ರೆಸ್ಸಿನ ನೇತೃತ್ವದಲ್ಲಿರುವ ಆಂಧ್ರ ಸರಕಾರ ನಿಜವಾಗಿಯೂ ಜಮೀನುದಾರರ ರಕ್ಷಣೆಗೆ ಮಾತ್ರ ಇದೆ ಎಂಬುದು ಮತ್ತೊಮ್ಮೆ ಇದರಿಂದ ಸ್ಪಷ್ಟವಾಗಿದೆ.

ಯಾವ ಜನತೆಗಾಗಿ ಜೀವನವಿಡೀ ಜಮೀನ್ದಾರರ ದಬ್ಬಾಳಿಕೆಯ ವಿರುದ್ಧ ಹೋರಾಟ ಮಾಡಿದರೋ, ಅದೇ ಜನತೆಗಾಗಿ ಅವರು ತಮ್ಮ ಪ್ರಾಣವನ್ನೇ ಬಲಿದಾನ ಮಾಡಿದರು.

60ವರ್ಷ ವಯಸ್ಸಿನ ಕಾಂ. ಈಶ್ವರರೆಡ್ಡಿಯವರ ಗೌರವಾರ್ಥ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಆಂಧ್ರ ಪ್ರದೇಶ ರಾಜ್ಯಸಮಿತಿ ಕಾರ್ಯಾಲಯ ಕೆಂಪು ಧ್ವಜವನ್ನು ಅರ್ಧಕ್ಕೆ ಇಳಿಸಲಾಗಿತ್ತು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯಸಮಿತಿಯು ರಾಜ್ಯದ ದುಡಿಯುವ ವರ್ಗದ ಪರವಾಗಿ ಕಾಂ. ಕೆ. ಈಶ್ವರರೆಡ್ಡಿಯವರಿಗೆ ತನ್ನ ಕೆಂಪು ವಂದನೆಗಳನ್ನು ಸಲ್ಲಿಸುತ್ತದೆ.

●

ಎಡರಂಗ ಸರ್ಕಾರವನ್ನು ಉರುಳಿಸಲು ಪಿತೂರಿ

ತ್ರಿಪುರಾ ರಾಜ್ಯದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಪತ್ರಿಕೆ "ದೇಸಾರ್ ಕಥಾ" ತನ್ನ ಜೂನ್ 29ರ ಸಂಚಿಕೆಯಲ್ಲಿ ಆಘಾತಕರ ಸುದ್ದಿ ಒಂದನ್ನು ಪ್ರಕಟಿಸಿದೆ. ಆನಂದಮಾರ್ಗ ಮತ್ತದರ ಸಹ-ಸಂಘಟನೆಯಾದ ಅಮ್ರ ಬಂಗಾಲಿ ಸಂಘಟನೆಯ ಬಗ್ಗೆ ಬರೆದಿರುವ ಪತ್ರಿಕೆಯ ವರದಿಯಂತೆ, ತ್ರಿಪುರಾ ರಾಜ್ಯದಲ್ಲಿ ಆನಂದಮಾರ್ಗಿಗಳ ಶಾಲೆಗಳು ಆಯುಧಗಳ ದಾಸ್ತಾನು ಮಳಿಗೆಗಳಾಗಿವೆ. ಈ ಶಾಲೆಗಳಲ್ಲಿ ಕೆಲಸ ಮಾಡುವ ಉಪಾಧ್ಯಾಯರುಗಳು, ಬಾಂಬು, ಬಿಲ್ಲು, ಬಾಣಗಳನ್ನು ತಯಾರು ಮಾಡುವ ಹಾಗೂ ಸರಬರಾಜು ಮಾಡುವ ಕೆಲಸದಲ್ಲಿ ನಿರತರಾಗಿದ್ದಾರೆ. ಇದಕ್ಕೆ ಉದಾಹರಣೆಯಾಗಿ, ದಕ್ಷಿಣ ತ್ರಿಪುರಾದ ಚಿಲೋನಿಯಾ ನಗರದಲ್ಲಿರುವ ಆನಂದ ಮಾರ್ಗಿಗಳ ಪ್ರಾಥಮಿಕ ಶಾಲೆ ಹಂಗಾಮಿಮುಖ್ಯೋಪಾಧ್ಯಾಯ ಪ್ರಣವಬಾಬು ಬರೆದಿರುವ ಪತ್ರದ ಸಾರಾಂಶವನ್ನು ಕೆಳಗೆ ಕೊಡಲಾಗಿದೆ.

ಪ್ರಣವಬಾಬು ಪತ್ರವನ್ನು ಆನಂದ ಮಾರ್ಗದ ಕಾರ್ಯದರ್ಶಿ ದೀಪಕ್‌ಡೇಗೆ ಬರೆದಿದ್ದಾರೆ. "ಯಾವುದಕ್ಕೂ ನಿರಾಶರಾಗಬೇಡಿ, ಪ್ರಾಣವನ್ನು ಕೈಯಲ್ಲಿ ಹಿಡಿದುಕೊಂಡು ಕೆಲಸಮಾಡಿ. ನಾಚಿಕೆ, ಅಂಜಿಕೆಗಳಿಂದ ಗಾಬರಿಯಾಗಬೇಡಿ. ನೀವು ಎಂದೂ ಸೋಲುವುದಿಲ್ಲವೆಂದು ಪರಮ ಪುರುಷ(ಆನಂದಮೂರ್ತಿ)ರು ಹೇಳಿದ್ದಾರೆ. ಶಕ್ತಿಯುತ ಪ್ರದರ್ಶನವನ್ನು ತನ್ನಿ. ಎಲ್ಲಾ ಕಡೆ ಕಿಡಿಹಾರಲಿ... ಉಪೇಂದ್ರನನ್ನು ಭೇಟಿಮಾಡಿ, ಟಿಂಕು ಜೊತೆಯಲ್ಲಿ ಕೆಲಸಮಾಡಿ (ಇಬ್ಬರೂ ಶ್ರೀಮಂತರು). ಪ್ರಣವಬಾಬು, ಟಿಂಕು ಬಾಬುಗೆ ಬರೆದಿರುವ ಪತ್ರದಲ್ಲಿ "ನೀವು ನಿಮ್ಮ ಕೆಲಸವನ್ನು ಮಾಡಿ, ಆನಂದ ಮೂರ್ತಿಗಳು ನಿಮ್ಮನ್ನು ಜಯಶಾಲಿಗಳಾಗಿಸುತ್ತಾರೆ"ಎಂದು ತಿಳಿಸಿರುತ್ತಾರೆ. ಇದೇ ಸಮಯದಲ್ಲಿ ವಿಜಯಾನಂದ ಅವಧೂತ, ರಾಷ್ಟ್ರಾಧ್ಯಕ್ಷರಿಗೆ ಪತ್ರ ಬರೆದು, "ನಮಗೂ ಅಮ್ರಬಂಗಾಲಿಗಳಿಗೂ ಯಾವುದೇ ಸಂಬಂಧವಿಲ್ಲ. ನಮ್ಮದು ಸ್ವತಂತ್ರ ಸಂಸ್ಥೆ. ಆದರೆ ಅವರು ಪ್ರಾಟಿಸ್ಟ್ ಕ್ರಾಂತಿಯನ್ನು ತರಲು ಕೆಲಸ ಮಾಡಿದರೆ, ನಾವು ಅವರಿಗೆ ಸಹಾಯ ಮಾಡುತ್ತೇವೆ. ಆನಂದ ಮಾರ್ಗದ ನೀತಿಗಳಿಗೆ ವಿರುದ್ಧವಾಗಿ ಕೆಲಸ ಮಾಡಿದರೆ, ಅವರನ್ನು ನಾವು ಕ್ಷಮಿಸುವುದಿಲ್ಲ. ಇದಕ್ಕೆ ತಕ್ಕ ಶಕ್ತಿ ನಮಗಿದೆ. ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಯುದ್ಧದ ಮುಂಚೂಣಿಯಲ್ಲಿ ಎದುರಿಸಲು ನಾವು ಸಿದ್ಧ. ಸಮಯಸಮೀಪಿಸುತ್ತಿದೆ. ಪ್ರಣವಬಾಬು ಮಾಂಟು ಎಂಬುವರಿಗೆ ಬರೆದಿರುವ ಪತ್ರದಲ್ಲಿ"ನನ್ನಸ್ಥಾನವನ್ನು ನೀನು ತುಂಬಬೇಕು, ಚಳುವಳಿ ಎಲ್ಲೆಡೆ ಹಬ್ಬುವಂತೆ ಕೆಲಸಮಾಡಿ. ಎಲ್ಲಾ ಮನೆಗಳಲ್ಲೂಬಾಂಬುಗಳನ್ನು ಶೇಖರಿಸಿ. ನಿರಾಶರಾಗಬೇಡಿ. ಇದು ದೇವರು ಒಡ್ಡಿರುವ ಪರೀಕ್ಷೆ......ಸ್ಕೂಲುಗಳಲ್ಲಿ ಬಾಂಬುಗಳಲ್ಲದೆ ವಿದೇಶಿ ಹಣವನ್ನು ಸಹ ಅಮ್ರಬಂಗಾಲಿಗಾಗಿ ಸಂಗ್ರಹಿಸಿದ್ದೇವೆಂದುಪೋಲೀಸರಿಗೆ ಸಂಶಯವಿದೆ. ನಾವು ಎಲ್ಲಾ ಕಡೆಗಳಲ್ಲಿ ಬೆಂಕಿಯನ್ನು ಹಚ್ಚಬೇಕು, ರಾಜಧಾನಿ ಅಗರ್ತಲಾವನ್ನು ಭಯದಲ್ಲಿ ಮುಳುಗಿಸಬೇಕು. ಕ್ರಾಂತಿಯನ್ನು ತನ್ನಿ".

ಕೊನೆಯಲ್ಲಿ, ಪ್ರಣವಬಾಬು, ಉಪೇಂದ್ರಬಾಬುವಿಗೆ ಬರೆದಿರುವಪತ್ರ "ಆಯುಧಗಳನ್ನು ಎಲ್ಲಾ ಮನೆಗಳಲ್ಲಿ ಸಂಗ್ರಹಿಸಿ; ಆಯುಧವಿಲ್ಲದೆ ಯಾರೂ ಹೊರಗೆ ಬರಬಾರದು. ಪರಿಸ್ಥಿತಿ ಶಾಂತವಾದ ನಂತರ, ಒಬ್ಬರಾದ ಮೇಲೆ ಒಬ್ಬರಂತೆ ಮುಗಿಸಿ; ಆ ದಿನ ನಮ್ಮ ಯೋಜನೆ ಏಕೆ ವಿಫಲವಾಯಿತು ? ಮತ್ತೊಂದು ಸಭೆಯನ್ನು ಕರೆಯಿರಿ. ಕೃಷ್ಣನ್ ಐವತ್ತು ನಂಬರಿನ ನೋಟುಗಳನ್ನು ಕೊಟ್ಟಿದ್ದಾನೆ. 3 ಬಾಂಬು

[ಕಡೆಯ ಪುಟ ನೋಡಿ]

ದಾಂಡೇಲಿ ಎಲೆಕ್ಟ್ರೋ ಮೆಟಲರ್ಜಿಕಲ್ ಕಾರ್ಮಿಕರ ಮೇಲೆ ಮೆನೇಜ್‌ಮೆಂಟಿನ ಗೂಂಡಾ ಆಕ್ರಮಣ - ಲಾಕ್ ಔಟ್

ದಾಂಡೇಲಿಯ ಎಲೆಕ್ಟ್ರೋ ಮೆಟಲರ್ಜಿಕಲ್ ಕಾರ್ಖಾನೆಯ (ಫೆರೋ ಅಲೋಯ್ಸ್) ಕಾರ್ಮಿಕಸಂಘ ಮತ್ತು ಆಡಳಿತ ವರ್ಗದ ನಡುವೆ ಏರ್ಪಟ್ಟಿದ್ದ ದ್ವಿಪಕ್ಷೀಯ ಒಪ್ಪಂದ ಕೊನೆಗೊಂಡಿದ್ದು ಹೊಸ ಒಪ್ಪಂದಕ್ಕಾಗಿ ಮಾತುಕತೆಗಳು ನಡೆದಿದ್ದರೂ ಅದು ಆಡಳಿತ ವರ್ಗದ ಹಟಮಾರಿತನದಿಂದಾಗಿ ನೆನೆಗುದಿಗೆ ಬಿದ್ದು ಒಪ್ಪಂದವೇರ್ಪಡಲು ಸಾಧ್ಯವಾಗಿಲ್ಲ. ಇದರಿಂದ ಅತೃಪ್ತಿ ಹೊಂದಿರುವ ನೌಕರರು ತೀವ್ರವಾದ ಚಳುವಳಿಯನ್ನು ನಡೆಸಬೇಕಾಯಿತು. ತಾ. 23-7-1979 ರಂದು ಬೆಳಗಾಂ ಜಿಲ್ಲಾ ಲೇಬರ್ ಕಮೀಶನರ್ ಅವರ ಸಮಕ್ಷಮ ರಾಜಿ ಪಂಚಾಯತಿ (conciliation) ಏರ್ಪಟ್ಟು ಅಲ್ಲೂ ಕೆಲವೊಂದು ಮುಖ್ಯ ವಿಷಯಗಳ ಬಗ್ಗೆ ಆಡಳಿತವರ್ಗ ಅಸಹಕಾರ ಮನೋಭಾವವನ್ನು ತೋರಿಸಿದ ಕಾರಣ ಯಾವುದೇ ಒಪ್ಪಂದಕ್ಕೆ ಬರಲು ಸಾಧ್ಯವಾಗಲಿಲ್ಲ. ತಾ. 6-8-79ರಂದು ಮತ್ತೊಮ್ಮೆ ಮಾತುಕತೆಗಳು ಜಿಲ್ಲಾ ಲೇಬರ್ ಕಮೀಶನರ ಮುಂದೆ ನಡೆಯಬೇಕೆಂದೂ, ಅಲ್ಲಿಯವರೆಗೆ ಎರಡೂ ಪಕ್ಷಗಳು ಯಥಾಸ್ಥಿತಿಯನ್ನು ಕಾಯ್ದುಕೊಂಡು ಬರಬೇಕೆಂದೂ ಸಹಮತಕ್ಕೆ ಬರಲಾಗಿತ್ತು.

ತಾ. 23 ರಂದು ರಾತ್ರೆ ಮೂರನೇ ಪಾಳಿಯ ಮೇಲೆ ಸುಮಾರು 30ಮಂದಿ ಕಾರ್ಮಿಕರು ದುಡಿಯುತ್ತಿದ್ದಾಗ ಆಡಳಿತ ವರ್ಗದವರು ಗೂಂಡಾಗಳ ಸಹಾಯದಿಂದ ಕಾರ್ಮಿಕರನ್ನು ಕಾರ್ಖಾನೆಯಿಂದ ಹೊರಹೋಗುವಂತೆ ಬಲವಂತ ಮಾಡಿದರಲ್ಲದೆ ಕಾರ್ಖಾನೆಯಲ್ಲಿ ಲಾಕ್ ಔಟ್ ನ್ನು ಘೋಷಿಸಿದರು. ಅದೇ ರಾತ್ರೆ 2 ಗಂಟೆಯ ಪಾಳಿಗೆ ಬರುತ್ತಿದ್ದ ಕಾರ್ಮಿಕರನ್ನು ಒಳಬರದಂತೆ ತಡೆಯಲಾಯಿತು. ಇದನ್ನು ತಿಳಿದ ಆಸುಪಾಸಿನ ಕಾರ್ಮಿಕರು ಕಾರ್ಖಾನೆಗೆ ಬಂದು ಆಡಳಿತವರ್ಗದ ಕ್ರಮವನ್ನು ಪ್ರಶ್ನಿಸಿದಾಗ ಅಲ್ಲಿದ್ದ ಸುರಕ್ಷಾ ಗಾರ್ಡ್‌ಗಳು ಕಾರ್ಮಿಕರ ಮೇಲೆ ಕಲ್ಲಿನ ಮಳೆಗರೆದರಲ್ಲದೆ-ಲಾಠಿಯಿಂದಲೂ ಅವರನ್ನು ಥಳಿಸಿದರು. ಇದರಿಂದ ಧೃತಿಗೆಡದ ಕಾರ್ಮಿಕರು ಈ ಧಾಳಿಯನ್ನು ಪರಿಣಾಮಕಾರಿಯಾಗಿ ಎದುರಿಸಿದ್ದಾರೆ ಮಾತ್ರವಲ್ಲ, ಇದೀಗ ಕಾರ್ಖಾನೆಯೊಳಗೇ ಉಳಿದು ಈ ಕಾನೂನುಬಾಹಿರ ಲಾಕ್ ಔಟನ್ನು ಕೂಡಲೇ ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿ ಚಳುವಳಿ ನಡೆಸುತ್ತಿದ್ದಾರೆ. ಇದೀಗ ಈ ಕಾರ್ಖಾನೆಯ ಆವರಣದಲ್ಲಿ ಪೋಲೀಸರ ಒಂದು ದೊಡ್ಡ ಪಡೆ ಬಂದಿಳಿದಿದ್ದು ಈ ಘಟನೆಗಳು ಕಾರ್ಮಿಕರಲ್ಲಿ ತೀವ್ರ ಅಸಮಾಧಾನಕ್ಕೂ ಕ್ಷೋಭೆಗೂ ಕಾರಣವಾಗಿದೆ. ●

ಸುಳ್ಯದಲ್ಲಿ ಎಸ್.ಎಫ್.ಐ. ಸಭೆ

ತಾ.27.7.79 ರಂದು ಸುಳ್ಯದಲ್ಲಿ ಎಸ್.ಎಫ್.ಐ. ಕಾರ್ಯಕರ್ತರ ಸಭೆ ಜರುಗಿತು. ಸಭೆಯ ಅಧ್ಯಕ್ಷಸ್ಥಾನವನ್ನು ಕಾಂ. ಸೂರ್ಯನಾರಾಯಣ ಭಟ್ ಅಡ್ವೋಕೇಟ್ ವಹಿಸಿದ್ದರು. ಎಸ್.ಎಫ್.ಐ.ಯ ಧ್ಯೇಯ ಧೋರಣೆಗಳ ಬಗ್ಗೆ ವಿವರಗಳನ್ನಿತ್ತರು. ಈ ಸಭೆಯು ಕಾಂ. ಹರಿಯಪ್ಪಗೌಡ, ಜೂನಿಯರ್ ಕಾಲೇಜು ಸುಳ್ಯ ಇವರನ್ನು ಸಂಚಾಲಕರಾಗಿ ನೇಮಿಸಿತು. ತಾ.5.8.79ರಂದು ಸುಳ್ಯದಲ್ಲಿ ಎಸ್.ಎಫ್.ಐ.ಯ ಬಹಿರಂಗ ಸಭೆ ನಡೆಸಲು ತೀರ್ಮಾನಿಸಲಾಯಿತು. ಸುಳ್ಯ ಮುನ್ಸಿಪಲ್ ಕೌನ್ಸಿಲರು ಕಾಂ.- ಪಿ. ಕೆ. ಮೂಸ ಧನ್ಯವಾದ ಅರ್ಪಿಸಿದರು. ○

ಮ್ಯಾಜಿಸ್ಟ್ರೇಟರ ತನಿಖೆಗೆ ಪ್ರತಿಭಟನೆ

ಹಳಿಯಾಳದ ಘಟನೆಯ ಬಗ್ಗೆ ಸರ್ಕಾರವು ದಿನಾಂಕ 26-7-79ರಂದು ಮ್ಯಾಜಿಸ್ಟ್ರೇಟರ ತನಿಖೆ ನಾಟಕವನ್ನು ನಡೆಸಿರುವುದನ್ನು ಹಳಿಯಾಳ ತಾಲ್ಲೂಕು ರೈತ-ಕೂಲಿಕಾರರ ಸಂಘದ ನೇತೃತ್ವದಲ್ಲಿ ನಭೆ ನಡೆಸಿ ಖಂಡಿಸಲಾಯಿತು. ತಾಲ್ಲೂಕಿನ ಎಲ್ಲ ಗ್ರಾಮಗಳ ಸಮಿತಿ ಸದಸ್ಯರು ಹಳ್ಳಿಗರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಸಹಾಯಕ ಜಿಲ್ಲಾಧಿಕಾರಿಯವರಿಗೆ ಈ ಬಗ್ಗೆ ಕರಪತ್ರ ಕೊಟ್ಟು ವಿಚಾರಣೆಗೆ ಬಹಿಷ್ಕಾರವನ್ನು ಮತ್ತು ಮ್ಯಾಜಿಸ್ಟ್ರೇಟರ ತನಿಖೆಗೆ ಧಿಕ್ಕಾರವನ್ನು ಸೂಚಿಸಲಾಯಿತು.

ಸಭೆಯಲ್ಲಿ ರೈತಸಂಘದ ಅಧ್ಯಕ್ಷ ಕಾಂ. ಉಡಚಪ್ಪಾ ಬೊಬಾಟಿ, ಕಾರ್ಯದರ್ಶಿ ಎಂ.ಸಮಿಉಲ್ಲಾ ಮತ್ತು ಕಾಂ. ಎನ್. ಜಿ. ಮ್ಹಾಳಸೇಕರ ಅವರು ಮಾತನಾಡಿದರು. ಹುತಾತ್ಮ ಮಾರುತಿ ಪವಾರರ ಕುಟುಂಬಕ್ಕೆ ಯೋಗ್ಯ ಪರಿಹಾರ ನೀಡಿಕೆ, ನಿರಪರಾಧಿ ರೈತರ ಮೇಲಿನ ಸುಳ್ಳು ಆರೋಪಗಳನ್ನು ಹಿಂತೆಗೆದುಕೊಳ್ಳುವುದು ಮುಂತಾದ ಬೇಡಿಕೆಗಳನ್ನು ಮತ್ತೆ ಒತ್ತಾಯಿಸಲಾಯಿತು. ○

ಹಳಿಯಾಳದಲ್ಲಿ ರೈತ-ಕೂಲಿಕಾರರ ಸಂಘದ ಸಭೆ

ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನ ರೈತ-ಕೂಲಿಕಾರರ ಸಂಘದ ಸಭೆಯು ತಾ. 16-7-79 ರಂದು ನಡೆದು ಕೆಲವು ತೀರ್ಮಾನಗಳನ್ನು ಅಂಗೀಕರಿಸಿತು. ರೈತರಿಗೆ ಕೃಷಿ ಸಲಕರಣೆಗಳನ್ನು ಮಾಡಲು ಯೋಗ್ಯವಾದ ಮರದ ಕಟ್ಟಿಗೆಗಳನ್ನು ಮುಫತ್ತಾಗಿ ಒದಗಿಸಲು ಪಾಸ್‌ನ ವ್ಯವಸ್ಥೆ, ರೈತರ ಹೊಲಗಳಿಗೆ ಬೇಲಿ ಹಾಕಲು ಕೊರೆಗಳು, ತಟ್ಟಿ ತಯಾರಿಸಲು ಬಿದಿರು ಮುಂತಾದುವು ಪಡೆಯಲು ಪಾಸ್‌ನ ವ್ಯವಸ್ಥೆ, ದನಕರುಗಳನ್ನು ಸರ್ಕಾರದ ಸಿಬ್ಬಂದಿಯು ಕೊಂಡವಾಡಕ್ಕೆ ಹಾಕುವ ನೀತಿಯನ್ನು ಕೈಬಿಡುವುದು-ಇವುಗಳ ಬಗ್ಗೆ ತೀರ್ಮಾನಗಳನ್ನು ಸಭೆ ಅಂಗೀಕರಿಸಿತು. ಈ ತೀರ್ಮಾನಗಳನ್ನು ಕಾರವಾರ ಜಿಲ್ಲೆಯ ಡೆಪ್ಯುಟಿ ಕಮೀಷನರ್ ಅವರಿಗೂ ಪ್ರತಿಮಾಡಿ ಕಳುಹಿಸಲಾಯಿತು.

ಫೆದರ್‌ಲೈಟ್ ಕಾರ್ಮಿಕ ಸಂಘದ ಸಭೆ

ಬೆಂಗಳೂರಿನ ಮೈಸೂರು ರಸ್ತೆಯಲ್ಲಿರುವ ಫೆದರ್‌ಲೈಟ್ ಕಾರ್ಪೋರೇಶನ್ ನೌಕರರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ತಾ. 3-8-79 ರಂದು ಕಾಂ. ಎಸ್. ಸೂರ್ಯನಾರಾಯಣ ರಾವ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯು ಡಬ್ಲ್ಯು. ಎಸ್. ಇನ್ಸುಲೇಟರ್ಸ್ ಇಂಡಿಯಾ ಲಿಮಿಟೆಡ್ ಹಾಗೂ ತಾತಗುಣಿ ಎಸ್ಟೇಟ್‌ನ ಕಾರ್ಮಿಕರ ಹೋರಾಟಗಳಿಗೆ ತನ್ನ ಬೆಂಬಲ ವ್ಯಕ್ತಪಡಿಸಿತು. ಕಾರ್ಖಾನೆಯ ಮಾಲೀಕರ ಮತ್ತು ಪ್ರಖ್ಯಾತ ಚಿತ್ರಕಾರ ರೋರಿಚ್ ಅವರ ಕಾರ್ಮಿಕ ವಿರೋಧಿ ನೀತಿ ಮತ್ತು ನಡತೆಯನ್ನು ಖಂಡಿಸಿ, ಈ ಎರಡು ಸಂಸ್ಥೆಗಳ ಕಾರ್ಮಿಕರ ಸಮಸ್ಯೆಗಳನ್ನು ಕೂಡಲೇ ಪರಿಹರಿಸಬೇಕೆಂದು ಸಭೆ ಒತ್ತಾಯಿಸಿತು. ಕಾರ್ಮಿಕರ ಮೇಲಿನ ಸುಳ್ಳು ಆಪಾದನೆಗಳನ್ನು ಪೋಲೀಸರು ಹಿಂತೆಗೆದುಕೊಳ್ಳಬೇಕೆಂದೂ ಒತ್ತಾಯಿಸಿ, ಈ ಎರಡೂ ಹೋರಾಟಗಳಿಗೆ ಸಂಘದ ವತಿಯಿಂದ 25 ರೂಗಳ ಕಿರುಕಾಣಿಕೆಯನ್ನು ನೀಡಬೇಕೆಂದು ಸಭೆ ತೀರ್ಮಾನಿಸಿತು. ●

ಗ್ರಾಮಾಂತರ ಜನರಿಂದ ಧರಣಿಮುಷ್ಕರ

ದ.ಕ. ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಗ್ರಾಮಾಂತರ ಜನರು ತಮ್ಮ ಅನುಕೂಲತೆಗಳನ್ನು ಪಡೆದುಕೊಳ್ಳಲು ತಹಸೀಲ್ದಾರರ ಕಚೇರಿಯ ಮುಂದುಗಡೆ ಆಗಸ್ಟ್ ಆರರಂದು ಬೆಳಿಗ್ಗೆ ಹನ್ನೊಂದು ಗಂಟೆಯಿಂದ ಧರಣಿಮುಷ್ಕರ ನಡೆಸಿದರು. ಪಶ್ಚಿಮ ಬಂಗಾಲದ ಎಡರಂಗ ಸರ್ಕಾರವು ಮಾಡುವಂತೆ ರೈತರಿಗೆ ಬಡ್ಡಿರಹಿತ ಸಾಲವನ್ನು ಸರ್ಕಾರವೇ ಕೊಡುವುದು, ರೈತರಿಗೆ ಭೂಮಿಯ ಪಟ್ಟಾಹಕ್ಕನ್ನು ಕೊಡುವುದು, 1974ರ ನೆರೆಹಾವಳಿಯಲ್ಲಿ ಮನೆಮಠ ಕಳೆದುಕೊಂಡವರಿಗೆ ಮನೆಕಟ್ಟಿಕೊಳ್ಳಲು ಸರ್ಕಾರವು ನೀಡಿರುವ ಸಾಲವನ್ನು ರದ್ದುಪಡಿಸುವುದು, ಮುಂತಾದ ಬೇಡಿಕೆಗಳಿಗಾಗಿ ಈ ಗ್ರಾಮಾಂತರ ಜನರು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಂಟ್ವಾಳ ತಾಲ್ಲೂಕು ಸಮಿತಿಯ ನೇತೃತ್ವದಲ್ಲಿ ಹೋರಾಟ ನಡೆಸುತ್ತಿದ್ದಾರೆ. ●

ಸುಳ್ಯದಲ್ಲಿ ಬೀಡಿ ಕೆಲಸಗಾರರ ಸಭೆ

ತಾ. 31. 7. 79 ರಂದು ಬೀಡಿ ಕೆಲಸಗಾರರ ಸಭೆಯು ದ.ಕ.ಜಿಲ್ಲೆಯ ಸುಳ್ಯದಲ್ಲಿ ಕಾಂ.ಬಾಲಕೃಷ್ಣನವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯದರ್ಶಿ ಪಿ.ಕೆ.ಮೂಸ ಮತ್ತು ಅಧ್ಯಕ್ಷ - ಕಾಂ. ಸೂರ್ಯನಾರಾಯಣ ಭಟ್ ರವರು ಬೀಡಿ ಮಜೂರರ ಸಮಸ್ಯೆಗಳ ಬಗ್ಗೆ ಮಾತನಾಡಿದರು. ಸಭೆಯು ಬೀಡಿಮಜೂರರಿಗೆ ಕನಿಷ್ಟ ಕೂಲಿಯನ್ನು ಕಂಟ್ರಾಕ್ಟ್‌ದಾರರು ಕೊಡದಿರುವುದನ್ನು ಖಂಡಿಸಿತು. ಬೀಡಿ ಕೆಲಸಗಾರರಿಗೆ ಕೆಲಸದ ನಿರಾಕರಣೆ, ಪಾಸ್ ಪುಸ್ತಕಗಳನ್ನು ನೀಡದಿರುವುದು, ಎಲೆ ಎವರೇಜ್ ಮೊದಲಾದುವುಗಳನ್ನು ನಿರಾಕರಿಸುವುದನ್ನು ಖಂಡಿಸಲಾಯಿತು.

ಈ ಸಮಸ್ಯೆಗಳ ಬಗ್ಗೆ ಒತ್ತಾಯಿಸಲು ಚಳುವಳಿ ನಡೆಸಲು ನಿರ್ಧರಿಸಲಾಯಿತು. ●

ತೋಟ ಕೆಲಸಗಾರರಸಂಘ ಸಮಿತಿ ಸಭೆ

ತಾ.29.7.79 ರಂದು ತೋಟ ಕೆಲಸಗಾರರ ಸಂಘ(ಸಿ.ಐ.ಟಿ.ಯು.)ನ ಕಾರ್ಯಕಾರಿ ಸಮಿತಿಯ ಸಭೆಯು ಕಾಂ.ಆರ್ಮುಗಂ ರವರ ಅಧ್ಯಕ್ಷತೆಯಲ್ಲಿ ದ.ಕ.ಜಿಲ್ಲೆಯ ಸುಳ್ಯದಲ್ಲಿ ಸೇರಿತು. ಪ್ರಧಾನ ಕಾರ್ಯದರ್ಶಿ ಕಾಂ.ಸೂರ್ಯನಾರಾಯಣ ಭಟ್ ಅಡ್ವೊಕೇಟ್ ವರದಿಯನ್ನು ಮುಂದಿಟ್ಟರು. ವರದಿಯ ಮೇಲೆ ಕಾಂ.ಕಾತ್ತಮುತ್ತು, ಕಾಂ.ಸುಬ್ರಮಣ್ಯ ಮತ್ತು ಕಾಂ.ರತ್ನಾಗಿರಿ ಮೊದಲಾದವರು ಮಾತನಾಡಿದರು. 15.5.79 ರಂದು ನಡೆದ ದ್ವಿಪಕ್ಷೀಯ ಒಪ್ಪಂದವನ್ನು ಜಾರಿಮಾಡುವಂತೆಯೂ ಸರಕಾರಿ ರಬ್ಬರ್ ತೋಟದ ಕಾರ್ಮಿಕರಿಗೆ ಬೋನಸ್ ನೀಡಿಕೆಯನ್ನು ಒತ್ತಾಯಿಸಿ ತಾ.20.8.79 ರಂದು ಎಲ್ಲಾ ರಬ್ಬರ್ ತೋಟಗಳ ಡಿವಿಜನಲ್ ಫಾರೆಸ್ಟ್ ಆಫೀಸರವರ ಆಫೀಸಿನಲ್ಲಿ ಸತ್ಯಾಗ್ರಹ ನಡೆಸಲೂ ತೀರ್ಮಾನಿಸಲಾಯಿತು. ○

ಹೋಟೆಲ್ ಕಾರ್ಮಿಕರ ಕ್ರಿಯಾ ಸಮಿತಿಯ ಪತ್ರಿಕಾಗೋಷ್ಠಿ

ಬೆಂಗಳೂರು ಹೋಟೆಲ್ ಕಾರ್ಮಿಕರ ಕ್ರಿಯಾಸಮಿತಿಯು ತಾ. 21-7-79 ರಂದು ಒಂದು ಪತ್ರಿಕಾಗೋಷ್ಠಿಯನ್ನು ನಡೆಸಿತು. ಇದರಲ್ಲಿ ಹೋಟೆಲ್ ಕಾರ್ಮಿಕರ ಹಲವಾರು ಸಮಸ್ಯೆಗಳನ್ನು ಪತ್ರಕರ್ತರ ಮುಂದೆ ಇಡಲಾಯಿತು.

ಅನಕ್ಷರಸ್ಥರೂ ಪರವೂರಿನವರೂ ಆದ ಹೋಟೆಲ್ ಕಾರ್ಮಿಕರು ಸಂಘಟಿತರಾಗಲು ಪ್ರಯತ್ನ ಪಟ್ಟಾಗಲೆಲ್ಲ ಮಾಲೀಕರು ಕಾನೂನಿನ ದುರುಪಯೋಗ ಪಡೆದು ಕಾರ್ಮಿಕರನ್ನು ಬಂಧಿಸುವಂತೆ ಮಾಡಿದ್ದಾರೆ. ಸ್ಥಳೀಯರಾರೂ ಈ ಕಾರ್ಮಿಕರಿಗೆ ಜಾಮೀನು ನೀಡಲಾರರೆಂಬುದನ್ನು ತಿಳಿದೇ ಹೋಟೆಲ್ ಮಾಲೀಕರು ಸುಳ್ಳುದೂರು ನೀಡಿ ಪೋಲೀಸರ ನೆರವಿನಿಂದ ಕಾರ್ಮಿಕ ಚಳುವಳಿಯನ್ನು ಮುರಿಯುತ್ತಿದ್ದಾರೆ. ಕಾರ್ಮಿಕರನ್ನು ವಜಾಮಾಡಿದರೆ ಆತ ಕಾರ್ಮಿಕ ಇಲಾಖೆಯ ಮೊರೆಹೋಗಬಹುದು ಇಲ್ಲವೇ ಉಳಿದ ಕಾರ್ಮಿಕರು ಇವನ ಪರವಾಗಿ ಹೋರಾಡಬಹುದು ಎಂದು ಯೋಚಿಸಿ ಮಾಲೀಕರು, ಕ್ರಿಮಿನಲ್ ದೂರನ್ನು ಸೃಷ್ಟಿಸಿ, ಸಂಘಟನೆ ನಡೆಸುವ ಕಾರ್ಮಿಕರನ್ನು ಬಂಧಿಸುವಂತೆ ಮಾಡುತ್ತಾರೆ. ಅವರ ತಂತ್ರದಲ್ಲಿ ಇನ್ನೂ ಕೆಲವು ಸೇರಿವೆ. ಹೊಸ ಕಾರ್ಮಿಕರನ್ನು ನೇಮಿಸಿಕೊಂಡು ಪೋಲೀಸರ ನೆರವಿನಿಂದ ಮತ್ತೆ ಹೋಟೆಲನ್ನು ಆರಂಭಿಸುವುದು, ನಷ್ಟವಾಯಿತೆಂದು ಒಂದಕ್ಕೆರಡು ಬರೆದು ವಿಮಾಹಣ ಕಬಳಿಸುವುದು, ಹೊಸ ಕಾರ್ಮಿಕರಿಗೆ ಭಯ ಹುಟ್ಟಿಸಿ, ಸಂಘಟಿತರಾಗದಂತೆ ಮಾಡುವುದು, ಸಂಘಟನೆಯ ಜವಾಬ್ದಾರಿ ಹೊರುವ ನಾಯಕರಿಗೆ ಕಳಂಕ ಹಚ್ಚಲು ಪ್ರಯತ್ನಿಸುವುದು ಮುಂತಾದವು.

ಮಾಲೀಕರ ತಂತ್ರಗಳು ಸ್ಪಷ್ಟವಾಗಿ ಕಾಣಿಸುವಂತಿದ್ದರೂ, ಪೋಲೀಸ್ ಅಧಿಕಾರಿಗಳು ದೂರಿನ ಸತ್ಯಾಸತ್ಯತೆಯನ್ನು ತಿಳಿಯದೆ, ಕಾರ್ಮಿಕರನ್ನು ಜೈಲಿಗೆ ಕಳುಹಿಸಲು ಉದ್ಯುಕ್ತರಾಗುತ್ತಾರೆ. ಇದೀಗ ಮಾಂಸಾಹಾರಿ ಹೋಟೆಲ್ ಕಾರ್ಮಿಕರೂ ಸಂಘಟಿತರಾಗಿದ್ದು, ಅವರ ಮೇಲೂ ಇಂಥ ಕಲ್ಪಿತ ಆರೋಪಗಳನ್ನು ಹೊರಿಸಿ ಬಂಧಿಸಿರುವುದನ್ನು ಕ್ರಿಯಾಸಮಿತಿ ಖಂಡಿಸುತ್ತದೆ. ದೂರಿನ ವಿಚಾರಣೆ ನಡೆಸದೆ ಯಾವುದೇ ಕಾರ್ಮಿಕರನ್ನು ಬಂಧಿಸದಂತೆಯೂ, ಕಲ್ಪಿತ ಮೊಕದ್ದಮೆಗಳನ್ನು ಕೂಡಲೆ ಹಿಂತೆಗೆದುಕೊಳ್ಳುವಂತೆ ಕ್ರಿಯಾಸಮಿತಿ ಸರ್ಕಾರವನ್ನು ಒತ್ತಾಯಿಸುತ್ತದೆ.

ಹೋಟೆಲ್ ಮಾಲೀಕರಿಗೆ ನಿಗದಿಪಡಿಸಿರುವ ಕನಿಷ್ಠ ವೇತನವನ್ನು ಪುನರ್ವಿಮರ್ಶಿಸಲು ಉದ್ದೇಶಿಸಿರುವ ರಾಜ್ಯ ಸರ್ಕಾರ ತಕರಾರು ಮತ್ತು ಸಲಹೆಗಳನ್ನು 1979ರ ಮಾರ್ಚ್ ಇಪ್ಪತ್ತ

[7ನೇ ಪುಟ ನೋಡಿ]

ಆರ್ಥಿಕ ಸಮೀಕ್ಷೆ:

ಹಣದುಬ್ಬರವನ್ನು ತಡೆಯಲು 'ಕೆಲಸಕ್ಕೆ-ಕಾಳು' ಕಾರ್ಯಕ್ರಮದಲ್ಲೂ ಕಡಿತ!

—ಆರ್. ಚಂದ್ರ

ಈ ವರ್ಷದ ಫೆಬ್ರವರಿ ತಿಂಗಳ ಕೊನೆಯಲ್ಲಿ ಕೇಂದ್ರಸರಕಾರದ ಮುಂಗಡ ಪತ್ರ ಪ್ರಕಟಗೊಂಡಾಗ,ಅದರಲ್ಲಿನ ತೆರಿಗೆ ಮುಂತಾದ ಸೂಚನೆಗಳಿಂದ ಬೆಲೆ ಏರಿಕೆಯು ಶೇ. 1 ಕ್ಕಿಂತ ಹೆಚ್ಚಾಗಲಾರದೆಂದು ಸರಕಾರದ ವಕ್ತಾರರು ಭರವಸೆ ಇತ್ತರೂ,ಮುಂದಿನ ತಿಂಗಳುಗಳಲ್ಲಿ ಬೆಲೆ ಏರಿಕೆ, ಹಣದುಬ್ಬರದ ಸಮಸ್ಯೆಗಳು ಬೃಹದಾಕಾರವಾಗಿ ಬೆಳೆದು ಎಲ್ಲರ ತಲೆ ತಿನ್ನಲಾರಂಭಿಸಿವೆ. ಸಗಟುವ್ಯಾಪಾರದ ಬೆಲೆಸೂಚಿಯು ಜೂನ್ 9, 1979 ರಂದು ಹಿಂದಿನ ವಾರಕ್ಕಿಂತ ಶೇ. 0.8 ರಷ್ಟು ಹೆಚ್ಚಿರುವುದನ್ನು ಗಮನಿಸಿದರೆ, ಸಧ್ಯ ಹಣದುಬ್ಬರದ ಹೆಚ್ಚಳದ ವಾರ್ಷಿಕದರವು ಶೇ.50ರಷ್ಟಿದೆ ಎಂದು ತಿಳಿಯುವುದು. ಈ ಒಂದೇ ವಾರದಲ್ಲಿ ಆಹಾರ ಧಾನ್ಯಗಳ ಸಗಟು ವ್ಯಾಪಾರ ಬೆಲೆ ಸೂಚಿಯು ಶೇ. 1.3 ರಷ್ಟು ಹೆಚ್ಚಿದ್ದು, ಕೈಗಾರಿಕಾ ಸಾಮಗ್ರಿಗಳ ಬೆಲೆಸೂಚಿಯು ಶೇ.3ರಷ್ಟು ಹೆಚ್ಚಿದೆ. ಮಳೆಗಾಲ ಪ್ರಾರಂಭವಾದುದು ವಿಳಂಭವಾದುದರಿಂದಲೂ, ಮುಂದಿನ ದಿನಗಳಲ್ಲಿ ದೇಶಾದ್ಯಂತ ಸಾಕಷ್ಟು ಮಳೆ ಬೀಳದಿದ್ದುದರಿಂದಲೂ, ಈ ವರುಷದ ಕೃಷಿ ಉತ್ಪಾದನೆಯು ಕುಸಿದು ಬೆಲೆಗಳು ಇನ್ನಷ್ಟೂ ಏರುವ ಸಂಭವ ಇದೆ.

ಬೆಲೆ ಏರಿಕೆ, ಹಣದುಬ್ಬರಗಳಿಗೆ ಕಾರಣಗಳು ಸ್ಪಷ್ಟವಾಗಿಯೇ ಇವೆ. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಖಾಸಗೀ ಸ್ವಾಮ್ಯದಲ್ಲಿರುವ ಕೃಷಿ, ಕೈಗಾರಿಕೆ ಮತ್ತು ವ್ಯಾಪಾರೋದ್ಯಮಗಳ ಅತಿ ಲಾಭದಿಂದಲೂ, ಸರಕಾರದ ಹೆಚ್ಚುತ್ತಿರುವ ಕೊರತೆ ಹಣ ಸೃಷ್ಟಿಯಿಂದಲೂ, ಸರಕಾರವು ಖಾಸಗೀ ಸ್ವಾಮ್ಯದಲ್ಲಿರುವ ಕೃಷಿ, ಕೈಗಾರಿಕೆ ಮತ್ತು ವ್ಯಾಪಾರೋದ್ಯಮಗಳಿಗೆ ನೀಡುವ ಉದಾರ ಧನ ಸಹಾಯಗಳಿಂದಲೂ, (subsidies), ಅವಶ್ಯಕ ವಸ್ತುಗಳ ಮೇಲೆ ಹೆಚ್ಚುತ್ತಿರುವ ಅಪ್ರತ್ಯಕ್ಷ ತೆರಿಗೆಗಳಿಂದಲೂ, ವಾಣಿಜ್ಯ ಬ್ಯಾಂಕುಗಳು ಖಾಸಗೀ ಕ್ಷೇತ್ರಕ್ಕೆ ಮಿತಿಮೀರಿ ಸಾಲ ಸೌಲಭ್ಯ ನೀಡುವುದರಿಂದಲೂ, ಖಾಸಗಿ ಹಾಗೂ ಸಾರ್ವಜನಿಕ ಕ್ಷೇತ್ರದಲ್ಲಿ ಅಪಾರ ಸಂಪನ್ಮೂಲಗಳನ್ನು ಅನುತ್ಪಾದಕ ವಿಷಯಗಳಿಗೇ ವ್ಯಯಿಸುವುದರಿಂದಲೂ, ತೆರಿಗೆ ತಪ್ಪಿಸಿ ಕಳ್ಳವ್ಯಾಪಾರ ವ್ಯವಹಾರಗಳಿಂದ ಗಳಿಸಿದ ಭಾರೀ ಪ್ರಮಾಣದ ಕಪ್ಪುಹಣದ ಚಲಾವಣೆಯಿಂದಲೂ, ದೇಶದ ರಫ್ತು ವ್ಯಾಪಾರಕ್ಕಿಂತ ಆಮದು ವ್ಯಾಪಾರವೇ ಹೆಚ್ಚುತ್ತಿದ್ದು ವಿದೇಶೀ ಬಂಡವಾಳಶಾಹಿಗಳ ನಿರಂತರ ಲಾಭಗಳಿಕೆಯಿಂದಲೂ, ದೇಶದಲ್ಲಿ ಬೆಲೆಏರಿಕೆ ಹಾಗೂ ಹಣದುಬ್ಬರದ ಸಮಸ್ಯೆಗಳು ಪದೇ ಪದೇ ಕಾಡುತ್ತಿವೆ. ಇದರಿಂದಾಗಿ, ರಾಷ್ಟ್ರೀಯ ಆದಾಯ ಮತ್ತು ಸಂಪತ್ತು ದೇಶದ ಕೆಲವೇ ಸ್ವಾಮ್ಯವರ್ಗದ ಶ್ರೀಮಂತರಲ್ಲಿ ಕೇಂದ್ರೀಕೃತವಾಗಿದ್ದು, ಆರ್ಥಿಕ ಅಭಿವೃದ್ಧಿಯೂ ಕುಂಠಿತವಾಗಿ, ದುಡಿಯುವ ಜನಕೋಟಿ ನಿರ್ಗತಿಕರಾಗುತ್ತಾ ಬಡತನ ನಿರುದ್ಯೋಗಗಳಿಂದ ನರಳುತ್ತಿರುವರು. ಆದರೆ, ಬಂಡವಾಳಶಾಹಿ ಪದ್ಧತಿಯು ಸಮಸ್ಯೆಗಳನ್ನು ಬಗೆಹರಿಸಲು ಕೈಗೊಳ್ಳುವ ಪರಿಹಾರ ಕಾರ್ಯಕ್ರಮಗಳಿಗೂ ದುಡಿಯುವ ಜನರೇ ತಲೆಕೊಡಬೇಕಾಗುವುದು! ಹಣದುಬ್ಬರವನ್ನು ತಡೆಯಲು "ಕೆಲಸಕ್ಕೆ-ಕಾಳು" (Food for work) ಕಾರ್ಯಕ್ರಮದಲ್ಲೂ ಕಡಿತಮಾಡಿರುವುದು ಇದಕ್ಕೊಂದು ಉತ್ತಮ ನಿದರ್ಶನ.

"ಕೆಲಸಕ್ಕೆ-ಕಾಳು" ಕಾರ್ಯಕ್ರಮದಲ್ಲಿ ಸ್ಥಗಿತ:

ಹಣದುಬ್ಬರವನ್ನು ತಡೆಯಲು ಜನತಾ ಸರಕಾರವು ಉರುಳುವ ಮೊದಲು ಕೈಕೊಂಡ ಮುಖ್ಯ ಕಾರ್ಯಕ್ರಮಗಳು:

1. ಸಾರ್ವಜನಿಕ ವೆಚ್ಚಗಳಲ್ಲಿ ಕಡಿತ,

2. ಬ್ಯಾಂಕು ಸಾಲಗಳಲ್ಲಿ ಕಡಿತ, ಮತ್ತು 3. ವೇತನಗಳಲ್ಲಿ ಕಡಿತ. ಸಾರ್ವಜನಿಕ ವೆಚ್ಚಗಳಲ್ಲಿ ಕಡಿತವೆಂದರೆ, ಅನಭಿವೃದ್ಧಿ ವಿಷಯಗಳಿಗಾಗಿ ನಡೆಯುವ ವೆಚ್ಚಗಳಲ್ಲಿ ಕಡಿತವಲ್ಲ.ಬದಲು, ಉತ್ಪಾದನೆ ಹಾಗೂ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಅಭಿವೃದ್ಧಿ ಯೋಜನೆಗಳ ವೆಚ್ಚಗಳಲ್ಲಿಯೇ ಕಡಿತ. ಗ್ರಾಮೀಣ ಹಾಗೂ ನಗರಗಳ ಬಡಜನರಿಗೆ ನೀಡುವ ಆರ್ಥಿಕ ನೆರವು ಮತ್ತು ಪರಿಹಾರಗಳ ವೆಚ್ಚಗಳಲ್ಲಿಯೇ ಕಡಿತ. ಅರ್ಥಾತ್, ಇಂತಹ ವೆಚ್ಚಗಳೇ ಹಣದುಬ್ಬರಕ್ಕೆ ಕಾರಣವೆಂದು ಸರಕಾರದ ವಾದ! ಇದರ ಸತ್ಯಾಸತ್ಯತೆ ಎಷ್ಟು?

1978-79ರಲ್ಲಿ "ಕೆಲಸಕ್ಕೆ-ಕಾಳು" ಕಾರ್ಯಕ್ರಮಕ್ಕೆ ರೂ. 30ಕೋಟಿ ನಿಗದಿಯಾಗಿದ್ದರೂ, ವರ್ಷಾಂತ್ಯದಲ್ಲಿ ರೂ. 100ಕೋಟಿ ವಿನಿಯೋಗವಾಯಿತು. ಅದೇ ಅವಧಿಯಲ್ಲಿ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಿಗೆ ರೂ.211ಕೋಟಿ ನಿಗದಿಯಾಗಿದ್ದರೂ, ರೂ3.0ಕೋಟಿಯಷ್ಟು ಖರ್ಚುಕಡಿಮೆಯೇ ಆಯಿತು. ಅಂದರೆ ಆಹಾರಧಾನ್ಯಗಳು ಸಾಕಷ್ಟು ಸಿಗುತ್ತಿದ್ದುದರಿಂದ ಕೇಂದ್ರ ಮತ್ತು ರಾಜ್ಯ ಸರಕಾರಗಳು ಅದರ ಪ್ರಯೋಜನ ಪಡೆದು ತಮ್ಮ ಗ್ರಾಮೀಣ ಅಭಿವೃದ್ಧಿ ಯೋಜನೆಗಳಿಗೂ ಆಹಾರಧಾನ್ಯಗಳ ಮೂಲಕವೇ ಸ್ವಲ್ಪಾಂಶ ಕೂಲಿ ಕೊಡಲಾರಂಭಿಸಿದವು. ಕಡುಬಡತನಕ್ಕೊಳಗಾದ ಅಸಂಖ್ಯಾತ ಗ್ರಾಮೀಣ ಕಾರ್ಮಿಕರು"ಕೆಲಸಕ್ಕೆ-ಕಾಳು"ಕಾರ್ಯಕ್ರಮದಿಂದ ಸ್ವಲ್ಪ ಪರಿಹಾರ ಪಡೆಯುವಂತಾಯಿತು.

ಕೇಂದ್ರಸರಕಾರದೊಡನೆ ಸುಮಾರು 22ಮಿಲಿಯ ಟನ್ ಆಹಾರಧಾನ್ಯಗಳ ದಾಸ್ತಾನು ಇರುವುದಾದರೂ,"ಕೆಲಸಕ್ಕೆ ಕಾಳು" ಕಾರ್ಯಕ್ರಮಕ್ಕೆ ಇದರ ಶೇ. 10 ರಷ್ಟನ್ನೂ ಬಿಡುಗಡೆ ಮಾಡಲಿಲ್ಲ. ಆದರೂ, ಈ ಕಾರ್ಯಕ್ರಮಕ್ಕೆ ಕೇಂದ್ರ ಸರಕಾರವು ನೀಡಿದ ಆಹಾರಧಾನ್ಯಗಳನ್ನೂ ಧನಸಹಾಯವನ್ನೂ ಅತ್ಯಂತ ಉಪಯುಕ್ತವಾಗಿ ಬಳಸಿಕೊಂಡ ರಾಜ್ಯಗಳಲ್ಲಿ ಪ.ಬಂಗಾಳ ಮೊದಲ ಸ್ಥಾನಗಳಿಸಿದೆ. 1978-79ರಲ್ಲಿ"ಕೆಲಸಕ್ಕೆ-ಕಾಳು" ಕಾರ್ಯಕ್ರಮದಲ್ಲಿ ಗ್ರಾಮೀಣ ಬಡ ಕಾರ್ಮಿಕರಿಗೆ 2.61 ಕೋಟಿ ದಿನಗಳ ಒಟ್ಟು ಉದ್ಯೋಗಾವಕಾಶ ಒದಗಿಸಿದೆ. ಅಲ್ಲದೆ, 1.16ಕೋಟಿ ದಿನಗಳ ಹೆಚ್ಚಿನ ಕೆಲಸಕ್ಕಾಗಿ ಬೇಕಾದ ಹಣ ಹಾಗೂ ಆಹಾರ ಧಾನ್ಯಗಳನ್ನೂ ಈಗಾಗಲೇ ವಿವಿಧ ಜಿಲ್ಲೆಗಳಿಗೆ ವಿತರಣೆ ಮಾಡಲಾಗಿದೆ."ಕೆಲಸಕ್ಕೆ-ಕಾಳು" ಸಾಮಾನ್ಯ ಕಾರ್ಯಕ್ರಮಕ್ಕೆ ಕೇಂದ್ರದಿಂದ 49,072 ಟನ್ ಗೋದಿ ಸಿಕ್ಕಿದ್ದು, ರಾಜ್ಯಸರಕಾರವು ಸುಮಾರು 4 ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದೆ.

ಇಷ್ಟೇ ಅಲ್ಲದೆ, ಕಳೆದ ವರ್ಷ ಭಾರೀ ನೆರೆಹಾವಳಿಗೆ ಒಳಗಾಗಿದ್ದ ಪ. ಬಂಗಾಳದಲ್ಲಿ ಅಲ್ಲಿನ ಎಡರಂಗ ಸರಕಾರವು ನೆರೆಹಾವಳಿ ಪೀಡಿತ ಪ್ರದೇಶಗಳ ಜನರಿಗೆ ಮರುವಸತಿಗಳನ್ನೊದಗಿಸಲಿಕ್ಕೂ, ಗ್ರಾಮೀಣ ಆಸ್ತಿಗಳನ್ನು ಪುನಃ ರೂಪಿಸುವುದಕ್ಕೂ 'ಕೆಲಸಕ್ಕೆ-ಕಾಳು' ಕಾರ್ಯಕ್ರಮವನ್ನೇ ವಿಶೇಷವಾಗಿ ಬಳಸಿಕೊಂಡಿತು. (see: West Bengal, 1-6-79 P. 432) ನೆರೆಹಾವಳಿಯಿಂದ 13.44 ಲಕ್ಷ ಮನೆಗಳು ನಾಶವಾಗಿದ್ದು ಅಥವಾ ತೀವ್ರ ಹಾನಿಗೊಳಗಾಗಿದ್ದು, ಜನರ ಮರುವಸತಿಗಾಗಿ ರೂ. 34.33 ಕೋಟಿ ಹಣ ಸಹಾಯ ಮಾಡಬೇಕೆಂದೂ, 85000 ಟನ್ ಗೋದಿ ಸರಬರಾಜು ಮಾಡಬೇಕೆಂದೂ ಪ. ಬಂಗಾಳದ ಸರಕಾರವು ಕೇಂದ್ರ ಸರಕಾರವನ್ನು ಕೇಳಿಕೊಂಡಿತ್ತು. ಆದರೆ, ಇಷ್ಟರ ವರೆಗೆ ಕೇಂದ್ರದಿಂದ ಕೇವಲ ರೂ. 18 ಕೋಟಿ ಹಣಸಹಾಯ ದೊರೆತಿದ್ದು, ರಾಜ್ಯ ಸರಕಾರವು ರೂ. 6 ಕೋಟಿ ಹಣ ಮೀಸಲಿಟ್ಟು, ಕೇಂದ್ರದಿಂದ ಇನ್ನೂ ರೂ. 10 ಕೋಟಿ ಸಹಾಯವನ್ನು ನಿರೀಕ್ಷಿಸುತ್ತಿದೆ. ಕಾರ್ಯಕ್ರಮಕ್ಕೆ ಬೇಕಾದ ಆಹಾರಧಾನ್ಯಗಳು ಕೇಂದ್ರದಿಂದ ಸಾಕಷ್ಟುಸಿಗದೆ, 'ಕೆಲಸಕ್ಕೆ ಕಾಳು' ಕಾರ್ಯಕ್ರಮದಲ್ಲಿ ಸರಬರಾಜಾದ ಆಹಾರಧಾನ್ಯಗಳಲ್ಲಿಯೇ 18750 ಟನ್ ಗೋದಿಯನ್ನು ನೆರೆಪೀಡಿತ ಜನರಿಗೆ ಮರುವಸತಿಗಾಗಿ ವಿನಿಯೋಗಿಸಲಾಯಿತು. ಗ್ರಾಮೀಣ ಆಸ್ತಿಗಳ ಪುನಃ ರಚನೆಗೆ ಎಡರಂಗ ಸರಕಾರವು ಪ್ರತಿಯೊಬ್ಬ ಗ್ರಾಮೀಣ ಕಾರ್ಮಿಕನಿಗೆ ದಿನಕ್ಕೆ 3 ಕೆ. ಜಿ. ಗೋದಿ ಮತ್ತು ರೂ. 2ರಷ್ಟು ಕೂಲಿ ಕೊಡಲು ತನ್ನ ರಾಜ್ಯ ಬೊಕ್ಕಸದಿಂದಲೇ ರೂ. 5 ಕೋಟಿ ಮೀಸಲಾಗಿಟ್ಟಿದೆ. ಆದರೆ, ಧಾನ್ಯಗಳ ರೂಪದ ಕೂಲಿಗೆ ಬೇಕಾದ ಒಟ್ಟು 75,000 ಟನ್ ಗೋದಿಯ ಬದಲು ಕೇಂದ್ರ ಕೇವಲ 25,250 ಟನ್ ಗೋದಿ ಒದಗಿಸಿದೆ. ಹೀಗಾಗಿ, ಕೇಂದ್ರದಿಂದ ಸಾಕಷ್ಟು ಆಹಾರಧಾನ್ಯಗಳ ಪೂರೈಕೆ ಮತ್ತು ಧನಸಹಾಯ ಸಿಗದೇ ಇದ್ದುದರಿಂದ ನೆರೆಪೀಡಿತ ಜನರಿಗೆ ಅತ್ಯಗತ್ಯವಾದ ಪರಿಹಾರವನ್ನೂ ಅವರ ಆಸ್ತಿಗಳ ಪುನಃ ರಚನೆಯನ್ನೂ ಮಾಡುವ ಕೆಲಸಗಳು ಅಪೂರ್ಣವಾಗಿಯೇ ಉಳಿದಿವೆ.

ಪತ್ರಿಕೆಗಳ ವರದಿಯಂತೆ, ಕೇಂದ್ರ ಹಣಕಾಸು ಖಾತೆಯು 1979-80ಕ್ಕೆ 'ಕೆಲಸಕ್ಕೆ-ಕಾಳು' ಕಾರ್ಯಕ್ರಮಕ್ಕೆ ರೂ. 100 ಕೋಟಿಯಷ್ಟೇ ವಿನಿಯೋಗಿಸಬೇಕೆಂದು ನಿರ್ಧರಿಸಿದೆ. ಅಂದರೆ, 1978-79ರ ವರ್ಷದಲ್ಲಿ ಖರ್ಚು ಮಾಡಿದಷ್ಟಕ್ಕೇ ಇದು ಸೀಮಿತವಾಗಿರಬೇಕೆಂದು ಕೇಂದ್ರ ಸರಕಾರದ ಹೊಸ ಉಳಿತಾಯ ಯೋಜನೆ! ಸರಕಾರದ ವಕ್ತಾರರ ಇತ್ತೀಚೆಗಿನ ಹೇಳಿಕೆಯಂತೆ, ಈ ಕಾರ್ಯಕ್ರಮಕ್ಕೆ ಸಾಕಷ್ಟು ಆಹಾರ ಧಾನ್ಯಗಳನ್ನೂ ಒದಗಿಸುವುದಿಲ್ಲವೆಂದು ತೋರುವುದು. ಪ. ಬಂಗಾಳದ ಹಣಕಾಸು ಮಂತ್ರಿ ಡಾ॥ ಅಶೋಕ ಮಿತ್ರರು ಕಲ್ಕತ್ತದಲ್ಲಿ ಜೂನ್ 25 ರಂದು ತಿಳಿಸಿದಂತೆ, ಪ. ಬಂಗಾಳ ಸರಕಾರವು ಕೇಳಿಕೊಂಡಂತೆ 75000 ಟನ್ನು ಹೆಚ್ಚು ಆಹಾರಧಾನ್ಯಗಳನ್ನು ಈ ಕಾರ್ಯಕ್ರಮಕ್ಕೆ ಒದಗಿಸಲು ಈಗಾಗಲೇ ಕೇಂದ್ರ ಸರಕಾರವು ನಿರಾಕರಿಸಿದೆ. ಕಾರಣ, 'ಕೆಲಸಕ್ಕೆ-ಕಾಳು' ಕಾರ್ಯಕ್ರಮವನ್ನು ವಿಸ್ತರಿಸುವುದರಿಂದ ಬೆಲೆ ಏರಿಕೆ ಉಂಟಾಗುವುದೆಂದು ಸರಕಾರದ ಹೊಸವಾದ. ಆದರೆ, 1979-80ರ ಕೇಂದ್ರ ಮುಂಗಡ ಪತ್ರವನ್ನು ಸಂಸತ್ತಿನಲ್ಲಿಮಂಡಿಸುವಾಗ ಆಗಿನ ಹಣಕಾಸು ಮಂತ್ರಿಯವರೇ ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ಈ ಕಾರ್ಯಕ್ರಮದಲ್ಲಿ ಧಾನ್ಯರೂಪದಲ್ಲಿಯೇ ಹೆಚ್ಚಿನ ಕೂಲಿಯನ್ನು ಕೊಡುವುದರಿಂದಲೂ ಮತ್ತು ಸ್ವಲ್ಪಾಂಶ ಕೂಲಿಯನ್ನು ಮಾತ್ರ ಹಣದ ರೂಪದಲ್ಲಿ ಕೊಡುವುದರಿಂದಲೂ, ಇದರಿಂದ ಹಣದುಬ್ಬರವಾಗುವುದಿಲ್ಲ ಎಂದು. ವಾಸ್ತವವಾಗಿ, ಧಾನ್ಯರೂಪದಲ್ಲಿ ಬಹುಪಾಲು ಕೂಲಿ ವಿತರಣೆ ಮಾಡಿದಾಗ ಆಹಾರಧಾನ್ಯಗಳ ಮತ್ತು ಇತರ ವಸ್ತುಗಳ ಬೆಲೆಗಳು ಇಳಿಮುಖವಾಗುವುವು. ಅಲ್ಲದೆ, ಈ ಕಾರ್ಯಕ್ರಮದಿಂದ ಗ್ರಾಮೀಣ ಬಡ ಕಾರ್ಮಿಕರು ವ್ಯಾಪಾರಿಗಳಿಂದ ಹಾಗೂ ಸಾಲ ನೀಡುವವರಿಂದ ಸ್ವಲ್ಪ ಸ್ವತಂತ್ರರಾಗಿರಲು ಸಾಧ್ಯವಾಗುವುದು. ಅವರ ಆತ್ಮವಿಶ್ವಾಸ, ಆತ್ಮಾಭಿಮಾನ ಮತ್ತು ಧೈರ್ಯ ಸ್ಥೈರ್ಯ ಹೆಚ್ಚಲೂ ಅನುಕೂಲವಾಗುವುದು. ಅವರಿಗೆ ತಾತ್ಕಾಲಿಕ ಉದ್ಯೋಗಾವಕಾಶ ಹಾಗೂ ಅತ್ಯಗತ್ಯದ ಪರಿಹಾರವನ್ನು ಈ ಕಾರ್ಯಕ್ರಮವುಒದಗಿಸುವುದು. ಇದರಿಂದಾಗಿ, ಪ. ಬಂಗಾಳದಲ್ಲಿ ಮೊತ್ತ ಮೊದಲು ವ್ಯವಸಾಯೇತರ ಸಮಯದಲ್ಲಿ ಗ್ರಾಮೀಣ ಪ್ರದೇಶಗಳಿಂದ ಉದ್ಯೋಗಕ್ಕಾಗಿ ಸಹಸ್ರಾರು ಜನರು ನಗರಗಳಿಗೆ ವಲಸೆ ಬರುವುದೂ ಸಂಪೂರ್ಣ ನಿಂತಿದೆ. ಆದರೂ, ಈ ಕಾರ್ಯಕ್ರಮಕ್ಕೆ ಕೇಂದ್ರ ಸರಕಾರ ಧನಸಹಾಯವನ್ನಾಗಲೀ ಆಹಾರಧಾನ್ಯಗಳನ್ನಾಗಲೀ ಒದಗಿಸಲು ಹಿಂಜರಿಯುವುದೇಕೆ? ಕೇಂದ್ರದೊಡನೆ 23 ಮಿಲಿಯ ಟನ್ ಆಹಾರಧಾನ್ಯಗಳ ದಾಸ್ತಾನು ಇದ್ದರೂ ಅದನ್ನು ಸದುಪಯೋಗ ಮಾಡುವುದಿಲ್ಲವೇಕೆ?

ಲಾಭಕ್ಕಾಗಿ ಉತ್ಪಾದನೆ:

ಬಂಡವಾಳಶಾಹಿ ಪದ್ಧತಿಯಲ್ಲಿ ಉತ್ಪಾದನೆಗೆ ಪ್ರಾಶಸ್ತ್ಯವೇ ಹೊರತು ವಿತರಣೆಗಲ್ಲ. ಕಡಿಮೆ ಕೂಲಿ ಮತ್ತು ಅಧಿಕ ಲಾಭದಿಂದ ಉತ್ಪಾದಿಸಿದ ಸಾಮಗ್ರಿಗಳನ್ನು ಕೊಂಡುಕೊಳ್ಳುವಷ್ಟು ದುಡಿಯುವ ಜನರಿಗೆ ಗ್ರಾಹಕಶಕ್ತಿ ಇಲ್ಲದಿದ್ದರೆ, ಬೆಲೆ ಕುಸಿಯದಂತೆ ಸರಕಾರವೇ ಅವುಗಳನ್ನು ಖರೀದಿಸಿ ಸಂಗ್ರಹಿಸುವುದು. ಸರಕಾರದ ಧನಸಹಾಯದಿಂದ ವಿದೇಶಗಳಿಗೆ ಲಾಭದಾಯಕವಾಗಿ ಅವುಗಳನ್ನು ರಫ್ತುಮಾಡಲಾಗುವುದು. ಉತ್ಪಾದನೆಯು ಬಹಳಷ್ಟು ಖಾಸಗೀ ಸ್ವಾಮ್ಯದಲ್ಲಿರುವುದರಿಂದ ಸರಕಾರವು ಪೋಷಕ ಬೆಲೆಗೆ ಆಹಾರ ಧಾನ್ಯಗಳನ್ನು ಖರೀದಿಸುವುದರಿಂದಲೂ, ಧನಸಹಾಯದಿಂದ ಅವುಗಳನ್ನು ರಫ್ತು ಮಾಡುವುದರಿಂದಲೂ ಖಾಸಗೀ ಸ್ವಾಮ್ಯವರ್ಗಕ್ಕೇ ಲಾಭ ದೊರಕುವುದು. ಅರ್ಥಾತ್, ದೊಡ್ಡ ಭೂಮಾಲಕರಿಗೂ ಶ್ರೀಮಂತ ರೈತರಿಗೂ ಲಾಭ ದೊರಕುವುದು. ಸಣ್ಣ ಹಾಗೂ ಮಧ್ಯಮ ದರ್ಜೆಯ ರೈತರು ತಮ್ಮ ತುರ್ತಿನ ಅಗತ್ಯತೆಗಳಿಗಾಗಿ ತಮ್ಮ ಫಸಲನ್ನು ಕೂಡಲೇ ಅಗ್ಗಕ್ಕೆ ಮಾರಾಟಮಾಡಿ, ಮುಂದೆ ವರ್ಷದ ಬಹುಭಾಗದಲ್ಲಿ ತಮ್ಮ ಅಗತ್ಯತೆಗಳಿಗಾಗಿ ಮಾರುಕಟ್ಟೆಯಿಂದ ಅಧಿಕ ಬೆಲೆಗೆ ಆಹಾರಧಾನ್ಯಗಳನ್ನು ಪಡೆದುಕೊಳ್ಳಬೇಕಾಗುವುದು. ಸ್ವಾಮ್ಯವರ್ಗಕ್ಕೆ ಬೇಕಾದುದು ಲಾಭ. ಅದು ಸ್ವದೇಶದಲ್ಲಿ ಸಿಗದಿದ್ದರೆ, ವಿದೇಶದಲ್ಲಿ ಸಿಕ್ಕಿದರೂ ಆದೀತು. ಲಾಭಕ್ಕೆ ದೇಶ ವಿದೇಶ ಎಂಬ ಭೇದ ಇಲ್ಲ. ಅಧಿಕ ಉತ್ಪಾದನೆಗೆ ಮಾತ್ರ ಕಾರ್ಮಿಕರಿಗೆ ದೇಶಪ್ರೇಮದ ಪ್ರಚೋದನೆ ಕೊಡಲಾಗುವುದು. ಅದರ ನ್ಯಾಯ ವಿತರಣೆ ಪ್ರಶ್ನೆ ಬಂದಾಗ ಸ್ವಾಮ್ಯವರ್ಗದ ದೇಶಪ್ರೇಮ ಬರಿದಾಗುವುದು, ಲಾಭದಕ್ಕೆ ಮೇಲಾಗುವುದು!

ಬೆಲೆಗಳು ಏರಬೇಕು!

ಲಾಭ ಹೆಚ್ಚುತ್ತಿರಬೇಕಾದರೆ, ಬೆಲೆಗಳೂ ಹೆಚ್ಚುತ್ತಿರಬೇಕು. 'ಕೆಲಸಕ್ಕೆ-ಕಾಳು' ಕಾರ್ಯಕ್ರಮದಿಂದ ಆಹಾರ ಧಾನ್ಯಗಳ ಬೆಲೆಗಳು ಇಳಿಮುಖವಾಗುವುವು ಎಂದು ನಾವು ಈ ಮೊದಲೇ ತಿಳಿಸಿದ್ದೇವೆ. ಗ್ರಾಮೀಣ ಕಾರ್ಮಿಕರಿಗೆ ಕೂಲಿಯ ಬಹುಪಾಲು ಆಹಾರ ಧಾನ್ಯಗಳ ಮೂಲಕ ಕೊಡುವುದರಿಂದ, ಅವರು ಅಷ್ಟರ ಮಟ್ಟಿಗೆ ಮಾರುಕಟ್ಟೆಗೆ

[6ನೇ ಪುಟ ನೋಡಿ]

ಮೊರಾರ್ಜಿ ನೈತಿಕತೆಯ ಬೆಲೆಯೇನು?

—ಇ.ಎಮ್.ಎಸ್. ನಂಬೂದಿರಿಪಾಡ್

ಆರ್.ಎಸ್.ಎಸ್.ನ ಮುಖವಾಣಿ "ಆರ್ಗನೈಸರ್"ನ ಜುಲೈ 29ರ ಸಂಚಿಕೆಯ ಮೊದಲ ಪುಟದಲ್ಲಿ "ಮೊರಾರ್ಜಿ ಅವರೇ ಮುಂದುವರಿಯುವುದು ನಿಶ್ಚಿತ" (Morarji all set to continue) ಮತ್ತು "ಆರ್.ಎಸ್.ಎಸ್. ವಿರೋಧಿಗಳಿಗೆ ಸೋಲು" (Tables turned on R.S.S. baiters) ಎಂಬ ಶೀರ್ಷಿಕೆಗಳಲ್ಲಿ ಎರಡು ಅಗ್ರಲೇಖನಗಳನ್ನು ಪ್ರಕಟಿಸಲಾಗಿದೆ.

ಎಲ್ಲ ಸಾಪ್ತಾಹಿಕ ಪತ್ರಿಕೆಗಳಂತೆ "ಆರ್ಗನೈಸರ್" ಕೂಡ ತನ್ನ ತಾ.29ರ ಸಂಚಿಕೆಯನ್ನು ತಾ.26ರಂದೇ ಬಿಡುಗಡೆಗೊಳಿಸಿತ್ತು. ಅದೇದಿನ ಮಧ್ಯಾಹ್ನ ಅಂದರೆ ಚರಣ್ ಸಿಂಗ್ ಅವರನ್ನು ರಾಷ್ಟ್ರಾಧ್ಯಕ್ಷರು ಆಮಂತ್ರಿಸಿರುವರೆಂಬ ಮತ್ತು ಸಂಜೆ 5-30ಕ್ಕೆ ಚರಣ್ ರಾಷ್ಟ್ರಪತಿಯನ್ನು ಕಾಣುವರೆಂಬ ಸುದ್ದಿ ನನಗೆ ತಲಪಿದ ಕೆಲವೇ ನಿಮಿಷಗಳ ನಂತರ ಈ ಪತ್ರಿಕೆಯ ಪ್ರತಿ ನನ್ನ ಕೈಸೇರಿತು. ಹಾಗಾಗಿ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಮೇಲಿನ ಎರಡು ತಲೆಬರಹಗಳನ್ನು ನೋಡಿ ನನಗೆ ತುಂಬಾ ಮೋಜೆನಿಸಿತು.

"ಈ ಪತ್ರಿಕೆ ಮುದ್ರಣಕ್ಕೆ ಹೋಗುತ್ತಿರುವ ವೇಳೆಗೆ ರಾಷ್ಟ್ರಾಧ್ಯಕ್ಷರು ಶ್ರೀ ಮೊರಾರ್ಜಿ ಮತ್ತು ಶ್ರೀ ಚರಣ್‌ಸಿಂಗರಿಗೆ ತಮ್ಮ ತಮ್ಮ ಬಲವನ್ನು ಸಾಬೀತುಪಡಿಸುವಂತೆ ಕೇಳಿಕೊಂಡಿದ್ದಾರೆ. ಈಗಿರುವ ಸ್ಥಿತಿಯಲ್ಲಿ ಶ್ರೀ ಮೊರಾರ್ಜಿ ಭಾಯಿ ಅವರು ತಮಗೆ ಬಹುಮತವಿರುವುದನ್ನು 48 ಗಂಟೆಗಳೊಳಗಾಗಿ ಪ್ರಮಾಣಪಡಿಸಲು ಸಮರ್ಥರಿದ್ದಾರೆ. ಈ ಸಾಲುಗಳು ಓದಲ್ಪಡುವ ವೇಳೆಗೆ ಅವರು ಹಿಂದೆಂದಿಗಿಂತಲೂ ಭದ್ರವಾಗಿ ತಮ್ಮ ಸ್ಥಾನದಲ್ಲಿ ನೆಲೆಯೂರಿರುತ್ತಾರೆ" ಎಂಬುದಾಗಿ ಆರ್ಗನೈಸರ್‌ನ ರಾಜಕೀಯ ವರದಿಗಾರರು ಬರೆದಿರುತ್ತಾರೆ.

"ಆರ್.ಎಸ್.ಎಸ್. ವಿರೋಧಿಗಳಿಗೆ ಸೋಲು" ಎಂಬ ಶೀರ್ಷಿಕೆ ಮತ್ತು "ಪ್ರತ್ಯೇಕಗೊಳಿಸುವವರು ಪ್ರತ್ಯೇಕಗೊಳಿಸಲ್ಪಟ್ಟಿದ್ದಾರೆ" (Isolators isolated) ಎಂಬ ಉಪಶೀರ್ಷಿಕೆಗಳಲ್ಲಿನ ಲೇಖನಗಳ ಬಗ್ಗೆ ಹೇಳಬೇಕೆಂದರೆ ಅವುಗಳನ್ನು ಆರ್.ಎಸ್.ಎಸ್.ನ ಕಾರ್ಯದರ್ಶಿ ಮತ್ತು ಜನತಾಪಕ್ಷದ ಅಧ್ಯಕ್ಷರು ನೀಡಿದ ಹೇಳಿಕೆಗಳ ಆಧಾರದಲ್ಲೇ ಬರೆಯಲಾಗಿದೆ. ಆರ್.ಎಸ್.ಎಸ್. ಮತ್ತು ಜನತಾಪಕ್ಷಗಳು ಬೇರೆಬೇರೆಯಾಗಬೇಕೆಂಬ ಬಹುಕಾಲದಿಂದಲೂ ಚರ್ಚೆಗೊಳಗಾದ ನಿಲುವೆಯನ್ನು ತಾತ್ವಿಕವಾಗಿ ಅಂಗೀಕರಿಸಲಾಗಿದೆಯೆಂದೂ ಅದನ್ನು ಕಾರ್ಯರೂಪಕ್ಕಿಳಿಸುವ ವಿಧಾನವನ್ನು ಮಾತ್ರ ಈಗ ಪರಿಶೀಲಿಸಲಾಗುತ್ತಿದೆಯೆಂದೂ ಈ ಇಬ್ಬರೂ ತಮ್ಮದೇ ಆದ ರೀತಿಯಲ್ಲಿ ಜನಸಾಮಾನ್ಯರನ್ನು ನಂಬಿಸಲು ಪ್ರಯತ್ನಿಸಿದುದು ಸ್ಪಷ್ಟ.

ದ್ವಿ ಸದಸ್ಯತನವನ್ನು ಕೊನೆಗಾಣಿಸಬೇಕೆಂಬ ಬೇಡಿಕೆಯನ್ನು ಆರಂಭದಿಂದಲೂ ವಿರೋಧಿಸುತ್ತಿದ್ದ ಮೊರಾರ್ಜಿ ಮತ್ತು ಅವರ ನಿಷ್ಠಾವಂತ ಬೆಂಬಲಿಗರಾದ ಆರ್. ಎಸ್. ಎಸ್. ಮುಂದಾಳುಗಳು ಕೇವಲ ತಮ್ಮ ಸಂಪುಟದ ಉಳಿಯುವಿಕೆಗಾಗಿ ತಾವೇ ಅದನ್ನು ಅಂಗೀಕರಿಸಬೇಕಾದುದು ಮತ್ತು ಹಾಗೆ ಮಾಡಿಯೂ ಸಂಪುಟ ಉಳಿಯಲಾರದೆ ಹೋದುದು ಅಪರಿಗಾದ ಅತ್ಯಂತ ದೊಡ್ಡ ಅವಮಾನಕಾರಿ ಸೋಲು.

ಆರ್. ಎಸ್. ಎಸ್. ಮತ್ತು ಜನಸಂಘೀಯರಿಗೂ ಆರ್. ಎಸ್. ಎಸ್. ಬೆಂಬಲದೊಂದಿಗೆ ಹೇಗಾದರೂ ಅಧಿಕಾರದ ಗದ್ದುಗೆಯಲ್ಲಿ ಉಳಿಯಬಹುದೆಂಬ ಭ್ರಮೆ ಹೊಂದಿದ್ದ ಜನತಾ ಪಕ್ಷದ ಜನಸಂಘೇತರ ರಾಜಕಾರಣಿಗಳಿಗೂ ಆದ ಅವಮಾನ ಇಷ್ಟೇ ಅಲ್ಲ. ತಾನು ಮಹಾ-ಸತ್ಯವಾದಿಯೆಂದೂ ಮತ್ತು ಎಲ್ಲಾ ನೈತಿಕ ಮೌಲ್ಯಗಳ ಪ್ರತಿಪಾದಕನೆಂದೂ ಇನ್ನೊಂದು ಬಣದವರು ಅನುಸರಿಸಿದ ಅನೈತಿಕ ಪಕ್ಷಾಂತರಗಳಿಂದಾಗಿ ತಾನು ರಾಜಿನಾಮೆ ನೀಡಬೇಕಾಗಿಬಂತೆಂದೂ ಜನರನ್ನು ನಂಬಿಸಲು ಪ್ರಯತ್ನಿಸಿದ ಮಾಜಿ ಪ್ರಧಾನಿ, ಅಧಿಕಾರಕ್ಕೆ ಅಂಟಿಕೊಳ್ಳುವ ಸಲುವಾಗಿ ಎಂತಹ ಅಡ್ಡದಾರಿಯನ್ನಾದರೂ ಬಳಸಿಕೊಳ್ಳಬಲ್ಲ ವ್ಯಕ್ತಿ ತಾನು ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟರು.

ಜುಲೈ 16 ರಂದು ಪ್ರಧಾನಿ ಪದವಿಗೆ ರಾಜಿನಾಮೆ ಕೊಡಲೇಬೇಕಾಗಿ ಬಂದಮೇಲೂ ಅವರು ಜನತಾ ಸಂಸದೀಯ ಪಕ್ಷದ ಮುಖಂಡನ ಸ್ಥಾನ ಬಿಟ್ಟುಕೊಡಲು ನಿರಾಕರಿಸಿದಾಗಲೇ ಅಧಿಕಾರ ಉಳಿಸಿಕೊಳ್ಳಲು ಮೊರಾರ್ಜಿ ಅವರ ಪರದಾಟ ಪ್ರಾರಂಭವಾಯಿತೆನ್ನಬೇಕು.

ಅವರ ಸಹೋದ್ಯೋಗಿಗಳು ಮತ್ತೆ ಮತ್ತೆ ವಿನಂತಿ ಮಾಡಿಕೊಂಡರೂ ಆ ಬಳಿಕ ಜಯಪ್ರಕಾಶನಾರಾಯಣರೇ ಕೇಳಿಕೊಂಡ ಮೇಲೂ ಮೊರಾರ್ಜಿ ತನ್ನ ನಿರ್ಧಾರ ಬದಲಿಸಲೇ ಇಲ್ಲ. ಸಂಸದೀಯ ಪಕ್ಷದ ನಾಯಕನ ಸ್ಥಾನಕ್ಕೆ ಅವರು ಬಲವಾಗಿ ಅಂಟಿಕೊಂಡಿದ್ದರು. ಮಾಜಿ ಪ್ರಧಾನಿ ಮತ್ತು ಮಾಜಿ ಉಪಪ್ರಧಾನಿಯ (ಜಗಜೀವನ ರಾಮ್) ಅವರೊಳಗೆ ಅಧಿಕಾರಕ್ಕಾಗಿ ನಡೆದ ಕಚ್ಚಾಟ ಪ್ರಾರಂಭವಾದುದೂ ಇಲ್ಲೇ.

ಯಾರಕಡೆ ಹೆಚ್ಚು ಪಕ್ಷಾಂತರಿಗಳು?

ಜನತಾಪಕ್ಷದ ಈ ಇಬ್ಬರು ದೊಡ್ಡ ಕುಳಗಳ ನಡುವೆ ಚರ್ಚೆಗೊಳಗಾದ ಪ್ರಶ್ನೆಯೆಂದರೆ ಈ ಇಬ್ಬರಲ್ಲಿ ಇತರ ಪಕ್ಷಗಳಿಂದ ಅತಿ ಹೆಚ್ಚಿನ ಸಂಖ್ಯೆಯ ಪಕ್ಷಾಂತರಿಗಳನ್ನು ಯಾರು ಆಕರ್ಷಿಸಬಲ್ಲರು ಅನ್ನುವುದಷ್ಟೆ ಎಂಬುದನ್ನೂ ಗಮನಿಸಬೇಕು. ಜಗಜೀವನರಾಮ್ ಹರಿಜನರ ಸಾರ್ವತ್ರಿಕವಾಗಿ ಸ್ವೀಕೃತ ಮುಂದಾಳುವೆನಿಸಿಕೊಂಡಿರುವ ಕಾರಣ ಅವರು ಜನತಾ ಸಂಸದೀಯ ಪಕ್ಷದ ಮುಖಂಡರಾದರೆ ಹರಿಜನರು, ಗಿರಿಜನರು, ಮತ್ತು ಇತರ ಜನಸಮುದಾಯವನ್ನು ಜನತಾಪಕ್ಷದೆಡೆಗೆ ಎಳೆದುಕೊಳ್ಳಬಲ್ಲರೆಂದೂ ಆ ಮೂಲಕ ಪ್ರಧಾನಿ ಪದವಿಗಾಗಿ ನಡೆಯುವ ಸ್ಪರ್ಧೆಯಲ್ಲಿ ಪಕ್ಷಕ್ಕೆ ಜಯಲಭಿಸುವುದೆಂದೂ ಜಗಜೀವನ ರಾಮರ ಪರವಾಗಿ ಹೇಳಿಕೊಳ್ಳಲಾಯಿತು. ಇನ್ನೊಂದೆಡೆ ದೇಸಾಯಿ ಸಂಸದೀಯ ಪಕ್ಷದ ಮುಖಂಡರಾದರೆ ಮಾತ್ರ ಕಾಂಗ್ರೆಸ್ ಪಕ್ಷದಲ್ಲಿ ಅತೃಪ್ತರಾಗಿ ಅನೇಕ ಕಾಂಗ್ರೆಸಿಗರೂ ಇತರ ಪಕ್ಷಗಳ (ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವೂ ಸೇರಿದಂತೆ) ಸದಸ್ಯರೂ ಜನತಾಕ್ಕೆ ಬೆಂಬಲ ನೀಡುವರೆಂದು ದೇಸಾಯಿ ಸಮರ್ಥಕರು ವಾದಿಸತೊಡಗಿದರು.

ಈ ಎರಡನೆಯ ವಾದ–ಅಂದರೆ ದೇಸಾಯಿ ಬೆಂಬಲಿಗರು ನೀಡಿದ ಹೇಳಿಕೆ, ಕೇವಲ ಹೇಳಿಕೆ ಮಾತ್ರವಾಗಿ ಉಳಿಯಲಿಲ್ಲ. ಅದನ್ನು ಕಾರ್ಯರೂಪಕ್ಕೂ ತರಲಾಯಿತು. ದೇಸಾಯಿ ಕೊಟ್ಟ ಪಟ್ಟಿಯಲ್ಲಿ ಹನ್ನೆರಡಕ್ಕೂ ಮಿಕ್ಕ ಕಾಂಗ್ರೆಸಿಗರ ಹೆಸರನ್ನು ಸೇರಿಸಲಾಗಿದ್ದುದರ ವಿರುದ್ಧ ಕಾಂಗ್ರೆಸ್ ಸಂಸದೀಯ ಪಕ್ಷವು ಉಗ್ರ ಪ್ರತಿಭಟನೆ ಸಲ್ಲಿಸಿತು. ಈ ಬಗ್ಗೆ ವಂಚನೆ ನಡೆದುದು ನಿಜವೆಂದು ದೇಸಾಯಿ ಅವರೇ ಈಗ ಒಪ್ಪಿಕೊಂಡಿದ್ದಾರೆ. ಮಾತ್ರವಲ್ಲ ಜನತಾ ಸಂಸದೀಯ ಪಕ್ಷದ ಮುಂದಾಳುತ್ವಕ್ಕೆ ಅವರು ರಾಜೀನಾಮೆ ನೀಡಿದುದಕ್ಕೂ ಇದೇ ಕಾರಣವನ್ನು ಕೊಡಲಾಗಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಹಾಗೂ ಕೇಂದ್ರ ಸಮಿತಿಗಳು ಪಕ್ಷದ ನಿಲುವೆಯನ್ನು ಸ್ಪಷ್ಟವಾಗಿ ಘೋಷಿಸಿದ ಮೇಲೂ ಜನತಾ ಸಂಸದೀಯ ಪಕ್ಷದ ಕಾರ್ಯದರ್ಶಿ ಡಾ॥ ಮುರಳೀ ಮನೋಹರ ಜೋಶಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಂಸತ್ ಸದಸ್ಯರ ಬೆಂಬಲ ಮೊರಾರ್ಜಿ ಅವರಿಗಿದೆ ಎಂದು ಹಲವು ಬಾರಿ ಹೇಳಿಕೊಂಡರು. ಮೊರಾರ್ಜಿ ತನ್ನ ಸಮರ್ಥಕರ ಪಟ್ಟಿಯನ್ನು ನೀಡಿದ ಮೇಲೂ ಸಹ, ಆ ಪಟ್ಟಿಯಲ್ಲಿ ಸಿ. ಪಿ. ಐ. (ಎಂ)ನ 22 ಮಂದಿ ಲೋಕಸಭಾ ಸದಸ್ಯರ ಹೆಸರು ಇದ್ದಿಲ್ಲವಾದರೂ ಸಿ. ಪಿ. ಐ. (ಎಂ) ದೇಸಾಯಿ ಅವರನ್ನೇ ಬೆಂಬಲಿಸುವುದೆಂದು ಡಾ. ಜೋಶಿ ಪ್ರಚಾರ ಮಾಡುತ್ತಿದ್ದರು. ಈಗಾಗಲೇ ತನ್ನ ನಿರ್ಧಾರ ಕೈಗೊಂಡಿರುವ ರಾಜಕೀಯ ಪಕ್ಷವೊಂದರ ಬಗ್ಗೆ ಈ ಬಗೆಯ ಹೇಳಿಕೆ ನೀಡುವುದು ಅಂತಹ ಪಕ್ಷದ ಸದಸ್ಯರನ್ನು ತಮ್ಮ ಬುಟ್ಟಿಗೆ ಹಾಕಿಕೊಳ್ಳುವ ಸಲುವಾಗಿ ನಡೆಸಿದ ನಾಚುಗೆಗೇಡಿ ಯತ್ನವೆಂದೇ ಹೇಳಬೇಕಾಗಿದೆ.

'ಆರ್ಗನೈಸರ್'ನ ಕಸರತ್ತು:

ಜನತಾಪಕ್ಷದಿಂದ ಪಕ್ಷಾಂತರಗಳಾಗುತ್ತಿರುವ ಕುರಿತು ಗಂಭೀರ ಕಳವಳ ವ್ಯಕ್ತಪಡಿಸುತ್ತಿರುವವರು ಸ್ವತಃ ತಾವು ಎಂತಹ ಕೆಳ ಮಟ್ಟಕ್ಕೂ ಇಳಿಯಬಲ್ಲರೆಂಬುದಕ್ಕೆ ಜುಲೈ 29ರ ಆರ್ಗನೈಸರ್‌ನಲ್ಲಿ ಪ್ರಕಟವಾದ ಈ ಕೆಳಗಿನ ಮಾತುಗಳೇ ಸಾಕ್ಷಿ.

"ದೇಶದ ಇಪ್ಪತ್ತೆರಡು ಮುಖ್ಯಮಂತ್ರಿಗಳಲ್ಲಿ ಇಪ್ಪತ್ತು ಮಂದಿ ಸಂಪುಟ ಉರುಳಿಸುವ ಈ ಆಟಕ್ಕೆ ವಿರುದ್ಧವಾಗಿದ್ದಾರೆ; ಅಸ್ಥಿರತೆಯು ಅಪಾಯಕಾರಿ ಎಂಬುದು ಅವರಿಗೆ ತಿಳಿದಿದೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು ಅವಿಶ್ವಾಸ ನಿರ್ಣಯಕ್ಕೆ ವಿರೋಧವಾಗಿರುವಂತಿದೆ. ಆದರೆ ಅವರು ಸದ್ಯಕ್ಕೆ ಲಂಡನ್‌ನಲ್ಲಿರುವ ಪ್ರಯುಕ್ತ ಅವರ ಅನುಪಸ್ಥಿತಿಯು ಕೆಲವು ಬದಲಾವಣೆಗಳಿಗೆ ಎಡೆಮಾಡಿಕೊಟ್ಟಿರುವಂತಿದೆ."

"ಇನ್ನೊಂದೆಡೆ ಹರಿಕಿಶನ್ ಸಿಂಗ್ ಸುರ್ಜಿತ್ ಅವರು ಇದಕ್ಕೆ ಪರವಾಗಿದ್ದಾರೆ. ಸಿ. ಪಿ. ಐ. (ಎಂ)ನ ಇಪ್ಪತ್ತೆರಡು ಪಾರ್ಲಿಮೆಂಟ್ ಸದಸ್ಯರಲ್ಲಿ ಅವರೊಬ್ಬರೇ ಒಂಭತ್ತು ಮಂದಿಯಿರುವ ಪೊಲಿಟ್‌ಬ್ಯೂರೋದ ಸದಸ್ಯರು, ಮತ್ತು ಅವರು 'ಜಾಟ್' ಆಗಿರುವ ಕಾರಣ ಚರಣಸಿಂಗರ ಕಡೆ ಬಲವುಳ್ಳವರಾಗಿದ್ದಾರೆ."

ಮೊದಲನೆಯದಾಗಿ ಸುರ್ಜಿತ್ ಅವರು ರಾಜ್ಯಸಭಾ ಸದಸ್ಯರೇ ಹೊರತು ಇಪ್ಪತ್ತೆರಡು ಮಂದಿ ಲೋಕಸಭಾ ಸದಸ್ಯರಲ್ಲಿ ಅವರೊಬ್ಬರಾಗಿರಲು ಸಾಧ್ಯವೇ ಇಲ್ಲ. ಸಿ. ಪಿ. ಐ. (ಎಂ)ನ ಪೊಲಿಟ್‌ಬ್ಯೂರೋ ಸದಸ್ಯರ ಸಂಖ್ಯೆ 11 (9 ಅಲ್ಲ) ರಾಜ್ಯಸಭಾ ಸದಸ್ಯರಾಗಿರುವ ಸುರ್ಜಿತ್ ಮಾತ್ರವಲ್ಲದೆ ರಾಮಮೂರ್ತಿ (ರಾಜ್ಯ ಸಭಾ ಸದಸ್ಯ) ಮತ್ತು ಸಮರ ಮುಖರ್ಜಿ (ಲೋಕ ಸಭಾ ಸದಸ್ಯ) ಅವರು ಕೂಡಾ ಪೊಲಿಟ್ ಬ್ಯೂರೋ ಸದಸ್ಯರೇ. ಈ ತಪ್ಪುತಪ್ಪಾದ ವಿವರಗಳ ವಿಷಯ ಹಾಗಿರಲಿ, ಮುಖ್ಯಅಂಶವೇನೆಂದರೆ ಅವಿಶ್ವಾಸ ನಿರ್ಣಯದ ಕುರಿತು ಪೊಲಿಟ್ ಬ್ಯೂರೋ ತನ್ನ ನಿರ್ಧಾರವನ್ನು ತಾ. 13-7-79 ರಂದೇ ಕೈಗೊಂಡಿತ್ತು ಮಾತ್ರವಲ್ಲ ಈ ನಿರ್ಧಾರ ಸರ್ವಾನುಮತದ್ದಾಗಿತ್ತು; ಆ ಬಳಿಕ ಜ್ಯೋತಿ ಬಸು ಅವರ ಸಮ್ಮುಖದಲ್ಲೇ ಕೇಂದ್ರಸಮಿತಿಯೂ ಈ ನಿರ್ಧಾರಕ್ಕೆ ತನ್ನ ಸರ್ವಾನುಮತದ ಅಂಗೀಕಾರವನ್ನೂ ನೀಡಿತ್ತು. ಸಿ.ಪಿ.ಐ.(ಎಂ) ನಂತಹ ಪಕ್ಷವೊಂದರ ಪಾರ್ಲಿಮೆಂಟ್ ಸದಸ್ಯರೂ ತಮ್ಮ ಪಕ್ಷದ ಅಧಿಕೃತ ಘಟಕಗಳಲ್ಲಿ ಕೈಗೊಳ್ಳಲಾದ ತೀರ್ಮಾನಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡಾರೆಂದು "ಆರ್ಗನೈಸರ್" ನಂಬಿದೆಯ?

ಸಿ.ಪಿ.ಐ.(ಎಂ)ನ ಪಾರ್ಲಿಮೆಂಟ್ ಸದಸ್ಯರು ಮೊರಾರ್ಜಿಗೆ ಬೆಂಬಲ ನೀಡಿಯಾರೇ ಎಂಬಮಾತು ತೀರಾ ಕ್ಷುಲ್ಲಕ ಹಾಗೂ ಹಾಸ್ಯಾಸ್ಪದ; ದೇಸಾಯಿ ಬೆಂಬಲಿಗರು ಅದೆಷ್ಟು ವಿವೇಚನಾಶೂನ್ಯರೆಂಬುದನ್ನಷ್ಟೇ ಇದು ತೋರಿಸಿಕೊಟ್ಟಿದೆ. ಹೀಗಿದ್ದರೂ ದೇಸಾಯಿ ಮತ್ತವರ ಬೆಂಬಲಿಗರು ಪಕ್ಷಾಂತರದ ಪಿಡುಗಿನ ಬಗ್ಗೆ ಇತರರಿಗೆ ಇನ್ನೂ ಉಪದೇಶ ನೀಡುತ್ತಲೇ ಇದ್ದಾರೆ.

ದೊಡ್ಡ ಬಂಡವಾಳಗಾರರ ಶಕ್ತಿಯ ಮೇಲೆ ವಿಶ್ವಾಸ:

ಜುಲೈ ತಿಂಗಳಲ್ಲಿ ಸಂಸತ್ ಅಧಿವೇಶನ ಪ್ರಾರಂಭವಾಗುವುದರೊಂದಿಗೆ ವಿಸ್ಫೋಟನೆಗೊಂಡ ರಾಜಕೀಯ ಬಿಕ್ಕಟ್ಟು ಮತ್ತು ಅದು ತಳೆದ ರೂಪವನ್ನು ಗಮನಿಸಿದವರಿಗೆ, ದೇಸಾಯಿ ಗುಂಪು ಪಕ್ಷಾಂತರದ ಕಾರಸ್ಥಾನವನ್ನು ಕೈಗೊಳ್ಳದಿದ್ದಲ್ಲಿ ಅಥವಅದರಲ್ಲಿ ಯಶಸ್ವಿಯಾಗದಿದ್ದಲ್ಲಿ ಸರಕಾರ ರಾಜೀನಾಮೆ ನೀಡಬೇಕಾಗುತ್ತದೆ; ಅಷ್ಟೇಅಲ್ಲ ಕೊನೆವರೆಗೂ ಅವರು ಆಶಿಸಿದ್ದಂತೆ ಸರಕಾರವನ್ನು ಹೇಗಾದರೂ ಹೊಸ ರೂಪದಲ್ಲಿ ಪುನಃ ಸಂಘಟಿಸಿಕೊಳ್ಳಲು ಸಾಧ್ಯವಾಗಲಾರದು ಎಂಬುದಂತೂ ಸ್ಪಷ್ಟವಾಗಿ ಗೋಚರಿಸಿತ್ತು. ಹಾಗಿರುವಾಗ ತಾವು ಇನ್ನೂ ಅಧಿಕಾರದಲ್ಲಿ ಮುಂದುವರಿಯಲು ಸಾಧ್ಯ ಎಂಬ ವಿಶ್ವಾಸವನ್ನು ಮೊರಾರ್ಜಿ ಬಣ ತಮ್ಮ ಬೆಂಬಲಿಗರಲ್ಲಿ ಉಂಟುಮಾಡಲು ಪ್ರಯತ್ನಿಸಿದುದು ಏಕೆ. ಅವರಿಗೆ ಹಿರಿಯ ಬಂಡವಾಳಗಾರರ ಶಕ್ತಿಯ ಮೇಲೂ ಆಡಳಿತ ಯಂತ್ರದ ಮೇಲೆ ತಮಗಿರುವ ಪ್ರಭಾವದ ಉಪಯುಕ್ತತೆ ಇತ್ಯಾದಿಗಳ ಮೇಲೆ ಅವರಿಗಿದ್ದ ಅಪಾರ ವಿಶ್ವಾಸವೇ ಇದಕ್ಕೆ ಹಿನ್ನಲೆ.

ಸರಕಾರವು ಬಿಕ್ಕಟ್ಟಿನಲ್ಲಿದ್ದಾಗ ದೇಶದ ಹಿರಿಯ ಬಂಡವಾಳಶಾಹಿ ಶಕ್ತಿಗಳೆಲ್ಲ ರಾಜಧಾನಿಯಲ್ಲಿ ಬೀಡುಬಿಟ್ಟ ಜನತಾಪಕ್ಷದಿಂದ ಹೊರಗೆ ತೊಲಗಿದ್ದ ಸಂಸತ್ ಸದಸ್ಯರನ್ನೂ ಈವರೆಗೂ ಬೇರೆ ಪಕ್ಷಗಳಲ್ಲೇ ಇದ್ದ ಪಾರ್ಲಿಮೆಂಟ್ ಸದಸ್ಯರನ್ನೂ ಒಬ್ಬೊಬ್ಬರನ್ನಾಗಿ ಅವರಿಗೆ ಬೆಂಬಲವಾಗಿ ಅಣಿನೆರೆಸಲು ಪ್ರಯತ್ನಿಸುತ್ತಿದ್ದರೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ, ಕೊನೆಗೂ ಈ ಆಟ ಸಾಗದಾಯಿತು.

ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಹೋರಾಟ ಮುಂದುವರಿಯಬೇಕು

ಆರ್. ಎಸ್. ಎಸ್. ಜನಸಂಘದ ಕೂಟ ಹಾಗೂ ಅದಕ್ಕೆ ಪೋಷಕರಾಗಿರುವವರಿಗೆ ಉಂಟಾಗಿರುವ ಈ ಸೋಲಿನಿಂದಾಗಿ ಜಾತ್ಯತೀತ ಶಕ್ತಿಗಳೂ ಸಹಜವಾಗಿ ತೃಪ್ತಿ ಹೊಂದಬಹುದಾದರೂ ಈಗ ಅಧಿಕಾರಕ್ಕೆ ಬಂದಿರುವ ಬಣವು ಆರ್. ಎಸ್. ಎಸ್–ಜನಸಂಘ ಕೂಟವನ್ನು ಸೋಲಿಸಲು ಅಷ್ಟೇ ದುಷ್ಟವಾಗಿರುವ ಇನ್ನೊಂದು ರಾಜಕೀಯ ಶಕ್ತಿಯ ಸಹಕಾರವನ್ನು ಪಡೆಯುವುದೂ ನ್ಯಾಯವೆಂಬುದಾಗಿ ಪರಿಗಣಿಸಿದುದು ತೀರಾ ದುರದೃಷ್ಟಕರ,

ಬದಲಿ ಸರಕಾರವನ್ನು ರಚಿಸುವ ಸಲುವಾಗಿ ಕಾಂಗ್ರೆಸ್ (ಐ) ಪಕ್ಷದ ಬೆಂಬಲವನ್ನು ಗಿಟ್ಟಿಸಲು ಚರಣಸಿಂಗ್ ಬಣ ಸಾಕಷ್ಟು ಬಹಿರಂಗವಾಗಿಯೇ ನಡೆಸಿದ್ದ ಪ್ರಯತ್ನಗಳ ಕುರಿತು ಇಲ್ಲಿ ಪ್ರಸ್ತಾಪಿಸುತ್ತಿದ್ದೇವೆ.

ಸರ್ವಾಧಿಕಾರದ ವಿರುದ್ಧ ಹೋರಾಟ :

ಚರಣಸಿಂಗರಿಗೆ ಕಾಂಗ್ರೆಸ್ (ಐ) ನೀಡಿರುವ ಬೆಂಬಲವು ಬೇಷರತ್ ಬೆಂಬಲವೆಂದೇ ಚರಣ್ ಗುಂಪಿನವರೂ ಕಾಂಗ್ರೆಸ್ (ಐ) ಮುಂದಾಳುಗಳೂ ಹೇಳಿಕೊಂಡಿದ್ದಾರೆ. ಎರಡೂ ಪಕ್ಷಗಳ ನಡುವೆ ಯಾವುದೇ ಚೌಕಾಶಿ ನಡೆದಿಲ್ಲ; ಯಾವುದೇ ಶರ್ತಗಳನ್ನೂ ಹೇರಲಾಗಿಲ್ಲ ಮತ್ತು ಯಾವ ಶರತ್ತುಗಳನ್ನೂ ಒಪ್ಪಿಕೊಳ್ಳಲಾಗಿಲ್ಲವೆಂದೂ ಹೇಳಲಾಗಿದೆ. ಹಾಗಿದ್ದರೆ ಕೆಲವರು ಜನತಾ (ಎಸ್) ಮುಖಂಡರು ಕಮಲಾಪತಿ ತ್ರಿಪಾಠಿ ಮತ್ತು ಸ್ಟೀಫನ್‌ರ ಬಳಿಗೆ ಹೋಗಿ, ಮಾತುಕತೆ ನಡೆಸಿ ಅವರನ್ನು ಚರಣ್ ಬಳಿಗೆ ಕರೆತರಬೇಕಾದ ಅಗತ್ಯವೇನಿತ್ತು? ಚರಣ್‌ಸಿಂಗ್ ಇಂದಿರಾಗಾಂಧಿಗೆ ಔಪಚಾರಿಕವಾಗಿ ಪತ್ರ ಬರೆದು ಅದರಲ್ಲಿ ಈ ಮಾತುಕತೆಗಳನ್ನು ಪ್ರಸ್ತಾಪಿಸಿ ತಮಗೆ ಬೇಷರತ್ ಬೆಂಬಲ ನೀಡಿದುದಕ್ಕಾಗಿ ಮೆಚ್ಚುಗೆ ವ್ಯಕ್ತಪಡಿಸಿದುದು ಯಾಕೆ?

ಕಾಂಗ್ರೆಸ್(ಐ)ನ ಮುಂದಾಳುಗಳಿಗಂತೂ ತಾವಿದ್ದಂತಹ ಪರಿಸ್ಥಿತಿಯಲ್ಲಿ ಚರಣ್ ಸಿಂಗರಿಗೆ ಬೇಷರತ್ ಬೆಂಬಲ ನೀಡುವುದನ್ನು ಬಿಟ್ಟು ಅನುಸರಿಸಲು ಅನ್ಯಮಾರ್ಗವೇ ಇರಲಿಲ್ಲ. ಒಂದು ವೇಳೆ ಹಾಗೆ ಬೆಂಬಲ ನೀಡದೇ ಇದ್ದಲ್ಲಿ ಅವರು ರಾಜಕೀಯ ಆತ್ಮಹತ್ಯೆ ಮಾಡಿಕೊಳ್ಳಲು ಬಯಸುತ್ತಿದ್ದಾರೆನ್ನಬಹುದಾಗಿತ್ತು. ಚರಣ್‌ಗೆ ಅಗತ್ಯವಿದ್ದ ಬೆಂಬಲವನ್ನು ನೀಡದೇ ಇರುವುದೆಂದರೆ ಮೊರಾರ್ಜಿ ದೇಸಾಯಿ ಮತ್ತೆ ಅಧಿಕಾರಕ್ಕೆ ಬರುವ ಸಾಧ್ಯತೆಯನ್ನು ಹೆಚ್ಚಿಸುವುದು; ಅಷ್ಟೇ ಅಲ್ಲ ವಾಸ್ತವವಾಗಿ ಜನಸಂಘ ಮತ್ತು ಆರ್.ಎಸ್.ಎಸ್. ಕೂಟವು ಅಧಿಕಾರದಲ್ಲಿ ಮುಂದುವರಿಯುವುದು ಎಂದರ್ಥ. ಇದನ್ನು ನಡೆಯಗೊಟ್ಟರೆ ಕಾಂಗ್ರೆಸ್(ಐ) ತಾನು ಚರಣ್ ಸಿಂಗ್ ಮತ್ತು ಚವಾಣ್-ಸ್ವರಣ್ ಸಿಂಗ್ ಕಾಂಗ್ರೆಸ್ಸನ್ನೂ ಒಳಗೊಂಡು ತನ್ನೆಲ್ಲ ವಿರೋಧಿಗಳನ್ನು ಎದುರಿಸಲು ಬಯಸಿ ಉಳಿಸಿಕೊಂಡಿದ್ದ ಒಂದೇ ಒಂದು ಅಸ್ತ್ರವನ್ನು ಕಳೆದುಕೊಳ್ಳಬೇಕಾಗುತ್ತಿತ್ತು.

ಕಾಂಗ್ರೆಸ್(ಐ) ಯೊಳಗಿನ ವಿದ್ಯಾಮಾನಗಳನ್ನು ಸೇರಿದಂತೆ ದೇಶದ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದರೆ, ಜನತಾ ಬಣದೊಳಗೆ ಆರ್.ಎಸ್.ಎಸ್ ಮತ್ತು ಜನಸಂಘಗಳು ಇತರರಿಂದ ಹೇಗೆ ದೂರೀಕರಿಸಲ್ಪಡುತಿದ್ದವೋ ಹಾಗೆಯೇ ಕಾಂಗ್ರೆಸ್(ಐ) ಕೂಡಾ ತೀವ್ರವಾಗಿ ಜನರಿಂದ ದೂರವಾಗುತ್ತಿತ್ತು ಮತ್ತು ಅದರ ಬೆಂಬಲವೂ ಇಳಿಮುಖವಾಗುತ್ತಿತ್ತು ಎಂಬುದು ಸ್ಪಷ್ಟ. ಇದೀಗ ಚರಣ್ ಸಿಂಗ್ ಇಂತಹ ಪಕ್ಷವೊಂದರ ಬೆಂಬಲ ಬಯಸಿದುದು ಆ ಪಕ್ಷದ ಪ್ರತಿಷ್ಠೆಯನ್ನು ಹೆಚ್ಚಿಸಲು ಸಹಕಾರಿಯಾಗಿದೆ ಅಷ್ಟೇ. ಚರಣ್ ಮತ್ತು ಅವರ ಬೆಂಬಲಿಗರ ಕೃತ್ಯದಿಂದಾಗಿ ಸರ್ವಾಧಿಕಾರದ ಪ್ರತೀಕವೆನಿಸಿದ್ದ ಶಕ್ತಿಯೊಂದಕ್ಕೆ ಆರ್.ಎಸ್.ಎಸ್.' ಮತ್ತು ಹಿಂದೂ ಸಂಕುಚಿತವಾದದ ವಿರುದ್ಧ ಹೋರಾಡುವ ಪರಿಣಾಮಕಾರಿ ಅಸ್ತ್ರವೆಂಬ ರೂಪವನ್ನು ಗಳಿಸಿಕೊಳ್ಳಲು ನೆರವಾಗಿದೆ.

ಜನತಾ(ಎಸ್)ಪಕ್ಷ ಮತ್ತು ಕಾಂಗ್ರೆಸ್‌ನ ಸಾಮಾನ್ಯ ಸದಸ್ಯರಲ್ಲೂ ಮಿತ್ರರಲ್ಲೂ ಈ ಬೆಳವಣಿಗೆಗಳು ತೀವ್ರ ಜಿಗುಪ್ಸೆಯನ್ನುಂಟುಮಾಡಿದೆ. ಇದರಿಂದಾಗಿ ಸ್ವತಃ ಭಾವೀ ಪ್ರಧಾನಿಯೂ ಸೇರಿದಂತೆ ಈ ಹೊಸ ಒಕ್ಕೂಟದ ಮುಂದಾಳುಗಳು ಸರ್ವಾಧಿಕಾರದ ವಿರುದ್ಧ ನಡೆಸುವ ಹೋರಾಟದ ವಿಷಯದಲ್ಲಿ ತಾವು ಯಾವುದೇ ರಾಜಿಗೆ ಸಿದ್ಧರಿಲ್ಲವೆಂದೂ ಘೋಷಿಸಿಕೊಳ್ಳುವಂತಾಗಿದೆ. ಫೆರ್ನಾಂಡಿಸ್, ಲಿಮಯೆ ಮೊದಲಾದ ಸಮಾಜವಾದಿ ಮುಖಂಡರೂ ತುರ್ತು ಪರಿಸ್ಥಿತಿಯ ಕರಾಳ ಕೃತ್ಯಗಳಿಗೆ ಕಾರಣರಾದವರ ಮೇಲೆ ಕ್ರಮಕೈಗೊಳ್ಳುವುದನ್ನು ಮುಂದುವರಿಸಬೇಕೆಂಬ ಶರ್ತದ ಮೇಲೆ ಮಾತ್ರವೇ ತಾವು ಹೊಸ ಸರಕಾರಕ್ಕೆ ಬೆಂಬಲ ನೀಡುವುದಾಗಿ ಸ್ಪಷ್ಟ ಹೇಳಿಕೆಯಿತ್ತಿದ್ದಾರೆ. ಹಾಗಾಗಿ ಕಾಂಗ್ರೆಸ್ (ಐ) ಯನ್ನು ಒಲಿಸಿಕೊಳ್ಳುವ ಧೋರಣೆಯ ವಿರುದ್ಧ ಹೋರಾಟ ಮುಂದುವರಿಯಬಹುದೆಂದೂ ಆಶಿಸಲಾಗಿದೆ.

ಈ ಹೊಸ ಒಕ್ಕೂಟದೊಳಗೂ ಒಂದು ವಿಭಾಗದ ಪಾಲಿಗೆ ಆರ್.ಎಸ್. ಎಸ್. ಜನಸಂಘ ಕೂಟ ಮತ್ತು ಹಿಂದಿನ ಪ್ರಧಾನಿ ಮೊರಾರ್ಜಿ ದೇಸಾಯಿಗಿಂತ ಕಾಂಗ್ರೆಸ್ (ಐ)ನ ಸರ್ವಾಧಿಕಾರಿಣಿ ಉತ್ತಮಳಾಗಿ ಕಂಡುಬಂದುದು ಸ್ಪಷ್ಟ. ಜನತಾ (ಎಸ್) ಅಧ್ಯಕ್ಷ ರಾಜನಾರಾಯಣ್ ಅವರು ಮೊರಾರ್ಜಿ ದೇಸಾಯಿಗಿಂತ ಇಂದಿರಾಗಾಂಧಿಯೇ ಒಳ್ಳೆಯವಳು ಎಂಬ ಹೇಳಿಕೆ ಇತ್ತಿರುವುದಾಗಿ ವರದಿಯಾಗಿದೆ. ಹಾಗೆಯೇ ಸಿ. ಪಿ. ಐ. ಕೂಡಾ ಇಂದು ಮೊರಾರ್ಜಿ ಆಡಳಿತ ಮತ್ತೆ ಬರುವುದೆಂದರೆ ಅದಕ್ಕಿಂತ ಕೆಟ್ಟದು ಇನ್ನೊಂದಿಲ್ಲ ಎಂದು ತನ್ನ ನಿಲುಮೆಯನ್ನು ದೃಢಪಡಿಸುವ ಮೂಲಕ ಇಂದಿರಾ ಆಡಳಿತೆ ಮರಳಿ ಸ್ಥಾಪನೆಗೊಳ್ಳುವುದು ಅಂತಹ ದೊಡ್ಡ ಅಪಾಯವೇನಲ್ಲ ಎಂಬುದಾಗಿ ಭಾವಿಸಿರುವಂತಿದೆ.

ಎಡಪಕ್ಷಗಳ ಕಾರ್ಯಾಚರಣೆಯಲ್ಲಿ ಐಕ್ಯ :

ಒಂದೆಡೆ ಕಾಂಗ್ರೆಸ್ (ಐ) ಮತ್ತು ಇನ್ನೊಂದೆಡೆ ಕೋಮುವಾದಿ, ಹಿಂದೂ ಸಂಕುಚಿತವಾದಿ ಆರ್. ಎಸ್. ಎಸ್. ಜನಸಂಘ ಕೂಟಗಳ ನಡುವೆ ಆಯ್ಕೆ ಮಾಡಲು ಏನಾದರೂ ಇದೆಯೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ನಂಬುವುದಿಲ್ಲ; ಹಾಗೆಯೇ ಅದು ದೇಶದ ಇತರ ಜಾತ್ಯತೀತ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳೂ ನಂಬುತ್ತಿಲ್ಲವೆಂದು ಆಶಿಸಿದೆ. ಈ ಎರಡರಲ್ಲಿ ಯಾವುದರ ಜೊತೆಗೂ ರಾಜಿಮಾಡಿಕೊಳ್ಳದೆ ಎರಡರ ವಿರುದ್ಧವೂ ಹೋರಾಟ ನಡೆಸಬೇಕಾದುದು ಇಂದಿನ ಅವಶ್ಯಕತೆ.

ಕಾಂಗ್ರೆಸ್ (ಐ) ಮತ್ತು ಆರ್. ಎಸ್. ಎಸ್. ಜನಸಂಘ ಕೂಟಗಳು ಮುಂದೊಡ್ಡುತ್ತಿರುವ ಅಪಾಯಗಳಲ್ಲಿ ಯಾವುದರ ತೀವ್ರತೆ ಹೆಚ್ಚು ಎನ್ನುವ ಕುರಿತು ಎಡ ಪಕ್ಷಗಳ ನಡುವೆ ಭಿನ್ನಾಭಿಪ್ರಾಯವಿರುವ ಕಾಲದಲ್ಲೇ ಕೇಂದ್ರವನ್ನು ನಲುಗಿಸಿ ಇದೀಗ ತಾನೆ ತಾತ್ಕಾಲಿಕವಾಗಿ ಮಾತ್ರ ಪರಿಹರಿಸಲ್ಪಟ್ಟಿರುವ ರಾಜಕೀಯ ಬಿಕ್ಕಟ್ಟು ಈ ಎಡ ಪಕ್ಷಗಳನ್ನು ಇನ್ನಷ್ಟು ಸಮೀಪಕ್ಕೆ ತಂದಿದೆ. ಸುಮಾರು ಹತ್ತು ದಿನಗಳ ಕಾಲ ನಡೆದ ಎಡ ಪಕ್ಷಗಳ ಹಲವಾರು ಸಭೆಗಳು ಮತ್ತು ಅದರಿಂದಾಗಿ ಸಾಧ್ಯವಾದ ಸಂಯುಕ್ತ ಕಾರ್ಯಾಚರಣೆ (ಈ ಮಧ್ಯೆ ಅಲ್ಲಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡರೂ ಕೂಡಾ) ಇವು ತೀರಾ ಉಪಯುಕ್ತಕರವಾಗಿ ಮತ್ತು ಅವುಗಳನ್ನು ಮುಂದುವರಿಸಬೇಕಾಗಿದೆ. ಅನುಭವದ ಆಧಾರದಲ್ಲಿ ಮತ್ತು ನಿರಂತರ ಹಾಗೂ ಪರಸ್ಪರ ವಿಚಾರವಿನಿಮಯಗಳ ಮೂಲಕ ಈ ಭಿನ್ನಾಭಿಪ್ರಾಯಗಳನ್ನು ಕ್ರಮೇಣ ಬಗೆಹರಿಸಲು ಸಾಧ್ಯ.

ಒಗ್ಗಟ್ಟನ್ನು ಬೆಳೆಸಬಹುದಾದ

ಮತ್ತು ಬೆಳೆಸಿಕೊಳ್ಳಲೇಬೇಕಾದ ಎಡ ಪಕ್ಷಗಳೆಂದರೆ ಕೇವಲ ಈ ರಾಜಕೀಯ ಮುಗ್ಗಟ್ಟಿನ ವೇಳೆ ಒಂದಾದ ಐದು ಎಡ ಪಕ್ಷಗಳು ಮಾತ್ರವಲ್ಲ. ಜನತಾದೊಳಗಿರುವ ಸಮಾಜವಾದಿಗಳು ಮತ್ತು ಜಾತ್ಯತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳು, ಪ್ರತ್ಯೇಕ ಗುಂಪಾಗಿ ಸಂಘಟಿತರಾಗಿರುವ ಜಾರ್ಜ್ ಫೆರ್ನಾಂಡಿಸ್ ಮತ್ತು ಮಧುಲಿಮಯೆ ನೇತೃತ್ವದ ಸಮಾಜವಾದಿಗಳು, ಜನತಾ(ಎಸ್) ಮತ್ತು ಕಾಂಗ್ರೆಸ್ಸಿನೊಳಗಿನ ವಾಮ ಪಂಥೀಯ ವ್ಯಕ್ತಿಗಳೂ ಇದರಲ್ಲಿ ಸೇರಬೇಕಾಗಿದೆ. ಆರ್.ಎಸ್.ಎಸ್. ಜನಸಂಘ ಕೂಟವನ್ನು ಸೋಲಿಸಿದಂತಹ ಎಲ್ಲ ಶಕ್ತಿಗಳ ಐಕ್ಯಕಾರ್ಯಾಚರಣೆಯನ್ನು ಉಳಿಸಿಕೊಂಡು ಅದನ್ನು ಇನ್ನಷ್ಟು ಬಲಯುತವಾಗಿ ಮಾಡುವ ಮೂಲಕ ಸರ್ವಾಧಿಕಾರಿ ಶಕ್ತಿಯನ್ನು ಪ್ರತಿನಿಧೀಕರಿಸುವ ಕಾಂಗ್ರೆಸ್(ಐ)ಹಾಗೂ ಕೋಮುವಾದಿ ಹಿಂದೂ ಸಂಕುಚಿತವಾದಿ ಶಕ್ತಿಗಳ ನೇತಾರನಾಗಿರುವ ಆರ್.ಎಸ್.ಎಸ್.ನ ಮೇಲೆ ಇನ್ನೂ ಬಲವಾದ ಪ್ರಹಾರವನ್ನು ನೀಡುವಂತೆ ಮಾಡಬೇಕಾಗಿದೆ. ●

ಪೋಲೀಸರ ನಿಷ್ಕ್ರಿಯತೆಯ ಖಂಡನೆ

ಕೊಡಗು ಜಿಲ್ಲೆ ಅಭ್ಯತವಂಗಲ ಒಂಟಿಅಂಗಡಿ ಪ್ರದೇಶದಲ್ಲಿ ತೋಟ ಕಾರ್ಮಿಕರು ಸಿ.ಐ.ಟಿ.ಯು.ವಿನ ಧ್ವಜದಡಿಯಲ್ಲಿ ಸಂಘಟಿತರಾಗುತ್ತಿರುವುದು ಆ ಪ್ರದೇಶದ ಮಾಲಕರಿಗೆಲ್ಲಾ ಕಳವಳವನ್ನುಂಟುಮಾಡಿದೆ.

ಆದ್ದರಿಂದ ಅವರಿಂದ ಪ್ರೇರಿತನಾಗಿ ಕಳ್ಳಭಟ್ಟಿ ಸಾರಾಯಿ ವ್ಯಾಪಾರ ನಡೆಸುವ ಕುಖ್ಯಾತ ಕೇಡಿ ಮತ್ತು ಆತನ ಸಂಗಡಿಗರು ಆ ಪ್ರದೇಶದಲ್ಲಿ ತೋಟದ ಕಾರ್ಮಿಕರ ಮೇಲೆ ಗೂಂಡಾ ಆಕ್ರಮಣ ನಡೆಸುತ್ತಿದ್ದಾರೆ. ಕುರುಂಬರಳ್ಳಿ, ಮೇರಿಲ್ಯಾಂಡ್ ಮೊದಲಾದ ತೋಟಗಳ ಕೆಲಸಗಾರರ ಮನೆನುಗ್ಗಿ ಅವರನ್ನು ಹೊಡೆಯುವುದು, ರಸ್ತೆಯಲ್ಲಿ ಅವರು ಹೋಗುವಾಗ ಅವರನ್ನು ಸಿಕ್ಕಸಿಕ್ಕಲ್ಲಿ ಹೊಡೆಯುವುದು, ಹೆಂಗಸರು ಮಕ್ಕಳ ಮೇಲೆ ಕೈಮಾಡುವುದು ಮೊದಲಾದ ಗೂಂಡಾಗಿರಿಯನ್ನು ಈ ಸಮಾಜ ದ್ರೋಹಿ ಕೂಟ ನಡೆಸುತ್ತಿದೆ.

ಈ ರೌಡಿಕೂಟ ಕಳ್ಳಭಟ್ಟಿ ತಯಾರಿಸುವುದನ್ನು ಹಿಡಿಯಲು ಅಬ್ಕಾರಿ ಖಾತೆಗೆ ಸಹಾಯವಿತ್ತನೆಂಬ ಕಾರಣಕ್ಕಾಗಿ ಕುರುಂಬರಳ್ಳಿ ತೋಟದಲ್ಲಿ ಕೆಲಸ ಮಾಡುವ ದೇವಸ್ಸಿ ಎಂಬವರ ಮನೆಗೆ ಹದಿನೈದು - ಇಪ್ಪತ್ತು ಗೂಂಡಾಗಳು ರಾತ್ರಿವೇಳೆಯಲ್ಲಿ ಅವನು ಮನೆಯಲ್ಲಿಲ್ಲದ ಸಂದರ್ಭದಲ್ಲಿ ಬಂದು ಅವನನ್ನು ಕೊಲೆ ಮಾಡುವುದಾಗಿ ಬೆದರಿಸಿ ಹೋಗಿರುವುದಾಗಿ ತಿಳಿದುಬಂದಿದೆ.

ಈ ರೌಡಿಕೂಟದ ಬಗ್ಗೆ ಸ್ಥಳೀಯ ಪೋಲೀಸ್ ಠಾಣೆಯಿಂದಾರಂಭಿಸಿ ಜಿಲ್ಲಾ ಪೋಲೀಸ್ ಅಧಿಕಾರಿಗಳವರೆಗೆ ಪುಕಾರು ಕೊಟ್ಟಿದ್ದರೂ ಪೋಲೀಸರು ಈ ಸಮಾಜ ದ್ರೋಹಿ, ರೌಡಿಕೂಟದವರ ವಿರುದ್ಧ ಯಾವ ಕ್ರಮ ಕೈಗೊಂಡಿಲ್ಲ ಪೋಲೀಸ್ ಖಾತೆಯ ಈ ನಿಷ್ಕ್ರಿಯತೆ ಈ ಗೂಂಡಾಗಳಿಗೆ ಉತ್ತೇಜನವಿತ್ತಿದೆ. ಮತ್ತು ಕಾರ್ಮಿಕರ ಜೀವನ ದಿನದಿಂದ ದಿನಕ್ಕೆ ಅಸಹನೀಯವಾಗಿದೆ.

ಈ ರೌಡಿಕೂಟದ ಹುಟ್ಟಡಗಿಸಿ ಈ ಪ್ರದೇಶದ ಕಾರ್ಮಿಕರು ನೆಮ್ಮದಿಯಿಂದ ಜೀವಿಸಲು ಪೋಲೀಸರು ಕ್ರಮಕೈಗೊಳ್ಳಬೇಕೆಂದು ಭಾರತ ಕಮ್ಯುನಿಸ್ಟ್(ಮಾರ್ಕ್ಸ್‌ವಾದಿ)ಪಕ್ಷದ ವಿರಾಜಪೇಟೆ ಶಾಖೆ ಪೋಲೀಸ್ ಅಧಿಕಾರಿಗಳನ್ನು, ಸರಕಾರವನ್ನು ವಿನಂತಿಮಾಡಿದೆ.

ದೇವರಾಜ ಅರಸುರವರು ಬೆಂಗಳೂರಿನಲ್ಲಿ ಕುಳಿತು ಬಡಜನರು, ಕಾರ್ಮಿಕರ ಉದ್ಧಾರದ ಬಗ್ಗೆ ಉದ್ದುದ್ದ ಭಾಷಣ ಬಿಗಿಯುತ್ತಿರುವಾಗಲೇ ಅವರ ಪೋಲೀಸರ ಈ ನಿಷ್ಕ್ರಿಯತೆ ಅವರ ಮಾತಿನ ಪೊಳ್ಳುತನವನ್ನು ಬಯಲಿಗೆ ತರುತ್ತದೆ.

ಇಂದಿರಾಗಾಂಧಿಯವರ ವಿರುದ್ಧ ದೇವರಾಜ ಅರಸರ ಹೋರಾಟ ಪ್ರಾಮಾಣಿಕವಾದದ್ದೆಂದು ಜನತೆ ಅವರನ್ನು ನಂಬಬೇಕಿದ್ದಲ್ಲಿ, ಅವರ ಪೋಲೀಸ್ ಖಾತೆ ಕಾರ್ಮಿಕರ ವಿರುದ್ಧ ಗೂಂಡಾಗಳಿಗೆ ರಕ್ಷಣೆ ಕೊಡುವ ಇಂದಿನ ಧೋರಣೆಯಲ್ಲಿ ಮೂಲಭೂತ ಬದಲಾವಣೆ ಬರಬೇಕು ಎಂದು ಪಕ್ಷದ ಶಾಖೆಯು ಹೇಳಿದೆ. ○

ಉಳ್ಳಾಲದಲ್ಲಿ ಸಂಯುಕ್ತಸಮಿತಿರಚನೆ

ದ.ಕ.ಜಿಲ್ಲೆ.ಮಂಗಳೂರು ತಾಲ್ಲೂಕಿನ ಉಳ್ಳಾಲ ಪ್ರದೇಶದ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ತೊಕ್ಕೊಟ್ಟಿನಲ್ಲಿ ಸಭೆ ಸೇರಿ ಪ್ರಸ್ತುತ ಸಿಟಿ ಬಸ್ ದರದ ಅವ್ಯವಸ್ಥೆಯನ್ನು ಸಾರ್ವಜನಿಕರ ಅವಗಾಹನೆಗೆ ತರುವ ಗೊತ್ತುವಳಿಯೊಂದನ್ನು ಸ್ವೀಕರಿಸಿದರು. ಕಿ.ಮೀ. ಪ್ರಕಾರ ಆರ್.ಟಿ.ಓ(R.T.O) ನಿಗದಿಪಡಿಸಿದ ದರಕ್ಕಿಂತ ಪ್ರತಿ ಸ್ಟಾಪಿಗೂ 10 ಪೈಸೆ ಜಾಸ್ತಿ ವಸೂಲಿ ಮಾಡುತ್ತಿರುವ ಬಸ್ ಮಾಲಕರ ಹಾಗೂ ಕಂಡಕ್ಟರರ "ಹಗಲು ದರೋಡೆ" ಕ್ರಮವನ್ನು ಸಭೆ ಖಂಡಿಸಿತು. ಬಡಜನರ ಅಜ್ಞಾನವನ್ನು ದುರುಪಯೋಗಿಸಿ, ತಿಳುವಳಿಕೆಯುಳ್ಳವರು ಅಲ್ಪ ಸ್ವಲ್ಪ ಮಟ್ಟಿಗೆ ವಿರೋಧಿಸಿದರೆ ಅವರಿಗೆ ಪೋಲೀಸ್ ಸ್ಟೇಷನಿನ ದಾರಿ ತೋರಿಸುತ್ತಿರುವರಲ್ಲದೆ, ಸಾರ್ವಜನಿಕರೊಡನೆ ಕಂಡಕ್ಟರರು ಅಪ್ರಮಾಣಿಕತೆಯಿಂದ ವರ್ತಿಸುತ್ತಿರುವರು. ಎಂದು ಸಭೆಯಲ್ಲಿ ಮಾತನಾಡಿದ ಪ್ರತಿನಿಧಿಗಳು ವಿವರಿಸಿದರು. ಈ ಬಗ್ಗೆ ತಾ.27.7.79 ರಂದು 9 ಸದಸ್ಯರುಳ್ಳ ಪ್ರತಿನಿಧಿಗಳು ಆರ್.ಟಿ.ಓ. ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿತು. ಈ ಸಮಸ್ಯೆಯನ್ನು ಕೂಡಲೇ ಪರಿಹರಿಸುವುದಾಗಿ ಆರ್.ಟಿ.ಓ.ಅವರು ಈ ಪ್ರತಿನಿಧಿಗಳಿಗೆ ಭರವಸೆಯಿತ್ತಿರುವರು. ಕಿ.ಮೀ.ಪ್ರಕಾರ ನಿಗದಿ ಪಡಿಸಿದ ದರಕ್ಕಿಂತ ಜಾಸ್ತಿ ವಸೂಲಿಮಾಡಿ ಬಡಜನರ ಸುಲಿಗೆ ಮಾಡುತ್ತಿರುವ ಈ ಅನ್ಯಾಯದ ವಿರುದ್ಧ ಸಾರ್ವಜನಿಕರು ಜಾಗೃತರಾಗಿ ಸಮಿತಿಯೊಂದಿಗೆ ಸಹಕರಿಸಬೇಕಾಗಿ ಉಳ್ಳಾಲ ಪ್ರದೇಶ ವಿವಿಧ ಸಂಘಸಂಸ್ಥೆಗಳ ಸಂಯುಕ್ತ ಸಮಿತಿಯ ಕನ್ವೀನರ್ ಪತ್ರಿಕಾ ಪ್ರಕಟಣೆಯೊಂದರಲ್ಲಿ ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ. ○

ಎಲಿಮಲೆಯಲ್ಲಿ ರೈತಸಂಘದ ಸ್ಥಾಪನೆ

ದ.ಕ.ಜಿಲ್ಲಾ ಸುಳ್ಯ ತಾಲ್ಲೂಕು ನೆಲ್ಲೂರು ಕೆಮ್ರಾಜೆ ಗ್ರಾಮದ ಎಲಿಮಲೆಯಲ್ಲಿ ರೈತಸಂಘದ ಸಂಘಟನೆಯಿದ್ದಿಲ್ಲ. ಈಗ ರೈತಸಂಘವನ್ನು ಕಟ್ಟಲಾಗಿದೆ. ತಾ.23.7.79 ರಂದು ಕಾಂ.ಕೆ.ಎಸ್. ಸೀದಿಕುಂಞಯವರ ಅಧ್ಯಕ್ಷತೆಯಲ್ಲಿ ರೈತರ ಸಭೆಯು ಸೇರಿ, ರೈತಸಂಘದ ಗ್ರಾಮ ಸಮಿತಿಯನ್ನು ರಚಿಸಲಾಯಿತು. ಗ್ರಾಮ ರೈತಸಂಘದ ಅಧ್ಯಕ್ಷರಾಗಿ ಕಾಂ. ಕೆ.ಎಸ್. ಸೀದಿಕುಂಞ, ಉಪಾಧ್ಯಕ್ಷರಾಗಿ ಕಾಂ.ಎಸ್.ಯೂಸುಫ್ ಮತ್ತು ಕಾರ್ಯದರ್ಶಿಯಾಗಿ ಕಾಂ.ಎನ್. ಎವ್.ಬಾಲಕೃಷ್ಣ ಇವರನ್ನು ನೇಮಿಸಲಾಯಿತು. ಒಂಭತ್ತು ಸದಸ್ಯರ ಗ್ರಾಮ ಸಮಿತಿಯನ್ನೂ ರಚಿಸಲಾಯ್ತು.

ಸುಳ್ಯ ತಾಲ್ಲೂಕು ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ.ಕೆ.ಮೋನಪ್ಪ ಗೌಡ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸುಳ್ಯ ಟೌನ್ ಕಮಿಟಿಯ ಕಾರ್ಯದರ್ಶಿ ಕಾಂ. ಪಿ. ಕೆ. ಮೂಸ, ಮತ್ತು ದೊಡ್ಡತೋಟದ ಕಾಂ.ಭಾಸ್ಕರ ರಾವ್ ಇವರುಗಳು ಸಭೆಯಲ್ಲಿ ಭಾಗವಹಿಸಿ ಸಂಘಟನೆಯ ಪ್ರಾಮುಖ್ಯತೆ ಮತ್ತು ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದರು. ○

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಬೆಂಗಳೂರು ಸರಕಾರಿ ಕಲಾ ಕಾಲೇಜಿನಲ್ಲಿ ಎಸ್. ಎಫ್. ಐ. ವಿಜಯ

ಬೆಂಗಳೂರು ನಗರ, ಸರ್ಕಾರಿ ಕಲಾ ಕಾಲೇಜಿನ ವಿದ್ಯಾರ್ಥಿ ಸಂಘಕ್ಕೆ ತಾ. 27.7.79ರಂದು ಚುನಾವಣೆಗಳು ನಡೆದವು. ಎನ್.ಎಸ್.ಯು.ಐ.ನ ಎರಡು ವಿಭಾಗಗಳು, ಎಸ್.ಎಫ್.ಐ. ಹಾಗೂ ಕೆಲವು ಸ್ವತಂತ್ರ ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಎಸ್. ಎಫ್. ಐ. ಇಬ್ಬರು ಅಭ್ಯರ್ಥಿಗಳನ್ನು ನಿಲ್ಲಿಸಿತ್ತು. ಕಾಲೇಜಿನ ಲಲಿತಕಲಾ ಕಾರ್ಯದರ್ಶಿ ಸ್ಥಾನಕ್ಕೆ ಕಾಂ.ಹೆಚ್.ಪಿ. ಜನಕರಾಜು, ಅಂತಿಮ ಬಿ.ಎ. ಮತ್ತು ಪಿ.ಯು.ಸಿ. ವಿಭಾಗದ ಸಹ ಕಾರ್ಯದರ್ಶಿ ಸ್ಥಾನಕ್ಕೆ ಕಾಂ.ಎನ್. ರಾಜಣ್ಣ, ದ್ವಿತೀಯ ಪಿ.ಯು.ಸಿ. ಇವರುಗಳು ಸ್ಪರ್ಧಿಸಿದ್ದರು.

ಅನೇಕ ವರ್ಷಗಳಿಂದ ಹಣ ಮತ್ತು ಗೂಂಡಾಗಿರಿಯಿಂದ ವಿದ್ಯಾರ್ಥಿಸಂಘವನ್ನು ಕೈವಶ ಮಾಡಿಕೊಂಡು,ವಿದ್ಯಾರ್ಥಿಗಳ ಯಾವುದೇ ಸಮಸ್ಯೆಗಳಿಗೆ ಗಮನ ಕೊಡದೆ, ವಿದ್ಯಾರ್ಥಿಗಳನ್ನು ಕುರಿಗಳನ್ನಾಗಿ ಮಾಡಲು ಯತ್ನಿಸುತ್ತಿದ್ದ ಇಂದಿರಾಗಾಂಧಿ ಪರ ವಿದ್ಯಾರ್ಥಿ ಸಂಘಕ್ಕೆ ಈ ಬಾರಿ ಮುಖಭಂಗವಾಗಿದೆ. ತಮಗೆ ಸೋಲಾಗುವುದನ್ನು ತಪ್ಪಿಸಿಕೊಳ್ಳಲು, ಎಸ್. ಎಫ್. ಐ. ಅಭ್ಯರ್ಥಿಗಳನ್ನು ಅಪಹರಿಸಲು, ಕಾರುಗಳನ್ನು ತಂದು ಇಂದಿರಾಪರ ಶಕ್ತಿಗಳು ಪ್ರಯತ್ನಿಸಿದರು. ಅಲ್ಲದೆ, ಎಸ್. ಎಫ್. ಐ. ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡುತ್ತಿದ್ದ, ಹಲವಾರು ಕಾರ್ಯಕರ್ತರ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದರು, ಆದರೆ, ಎಲ್ಲಾ ಕುತಂತ್ರಗಳನ್ನು ವಿಫಲಗೊಳಿಸಿ, ಎಸ್.ಎಫ್.ಐ.ನ ಕಾಂ.ಜನಕರಾಜುರವರು, ಒಟ್ಟು 700 ಮತಗಳ ಪೈಕಿ 365 ಮತಗಳನ್ನು ಪಡೆದರು. ಕಾಂ. ರಾಜಣ್ಣನವರು ಪಿ.ಯು.ಸಿ. ವಿದ್ಯಾರ್ಥಿಗಳ ಒಟ್ಟು 206 ಮತಗಳ ಪೈಕಿ 115 ಮತಗಳನ್ನು ಪಡೆದರು. ಉಳಿದ ಸ್ಥಾನಗಳು ಎಸ್.ಎಫ್.ಐ. ಹೊಂದಾಣಿಕೆ ಮಾಡಿಕೊಂಡಿದ್ದ ಮಿತ್ರ ವಿದ್ಯಾರ್ಥಿ ಸಂಘಗಳಿಗೆ ಲಭಿಸಿವೆ.

ಕರ್ನಾಟಕದಲ್ಲಿ, ಅದರಲ್ಲಿಯೂ ರಾಜಧಾನಿ ಬೆಂಗಳೂರು ನಗರದ ವಿದ್ಯಾರ್ಥಿ ಚಳುವಳಿಯ ದೃಷ್ಟಿಯಿಂದ, ಎಸ್.ಎಫ್.ಐ.ನ ಈ ವಿಜಯ ಗಮನಾರ್ಹವಾದುದು.

ಗೆದ್ದ ವಿದ್ಯಾರ್ಥಿ ನಾಯಕರನ್ನು ಹಾಗೂ ಗೆಲುವಿಗೆ ಶ್ರಮಿಸಿದ ಎಲ್ಲಾ ಹಿತೈಷಿಗಳು, ಸದಸ್ಯರು ಮತ್ತು ಬೆಂಗಳೂರು ಜಿಲ್ಲಾ ಎಸ್.ಎಫ್.ಐ. ಅಧಿಕಾರ ವರ್ಗವನ್ನು, ಕರ್ನಾಟಕ ರಾಜ್ಯ ಸಮಿತಿ ಅಭಿನಂದಿಸುತ್ತದೆ. ●

ಪರಿಹಾರವಿಲ್ಲದೆ ಭೂಒಡೆತನ ನೀಡಬೇಕು

ದ. ಕ. ಜಿಲ್ಲಾ ಉಡುಪಿ ತಾಲ್ಲೂಕು ರೈತಸಂಘದ ಸಮಿತಿಯ ಸಭೆಯು 31-7-1979 ರಂದು ಕಾಪು ಕ್ಷೇತ್ರದ ಮಲ್ಲಾರಿನಲ್ಲಿ ಕಾಂ. ಟಿ. ಎಸ್. ಕೋಟಿಯಾನರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರಂಭದಲ್ಲಿ ಕಾರ್ಯದರ್ಶಿ ಡೇವಿಡ್ ಕರ್ಕಡರು ಜಿಲ್ಲಾ ರೈತಸಂಘದ ಸಮಿತಿಯು ಇತ್ತೀಚೆಗೆ ಸಭೆಸೇರಿ ಮಾಡಿರುವ ತೀರ್ಮಾನಗಳನ್ನು ವಿವರಿಸಿದರು.

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ನಡೆದ ರೈತರ ಚಳುವಳಿಗೆ ಬೆಂಬಲ ನೀಡಿ, ಗೋಲಿಬಾರಿನಲ್ಲಿ ಮೃತರಾದ ಕಾಂ. ಮಾರುತಿ ಗಣೇಶ ಪವಾರರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಹಳಿಯಾಳದಲ್ಲಿ ಈಗಲೂ ನಡೆಯುತ್ತಿರುವ ರೈತ ಕಾರ್ಯಕರ್ತರುಗಳ ಬಂಧನವನ್ನು ಖಂಡಿಸಲಾಯಿತು.

1977ರ ನೆರೆ ಪ್ರವಾಹ ಪೀಡಿತರಿಗೆ ಮನೆ ಕಟ್ಟಲು ನೀಡಿದ ಸಾಲಗಳನ್ನು ವಸೂಲುಮಾಡಲು ದಂಡಪ್ರಯೋಗ ಮಾಡಿ ಬಲಾತ್ಕರಿಸುವುದನ್ನು ನಿಲ್ಲಿಸಿ ರೈತರ ಎಲ್ಲಾ ಸಾಲಗಳನ್ನು ರದ್ದುಗೊಳಿಸುವಂತೆಯೂ, ಪರಿಹಾರವಿಲ್ಲದೆ ಭೂ ಒಡೆತನ ನೀಡುವಂತೆಯೂ ಸರಕಾರವನ್ನು ಒತ್ತಾಯಿಸಲಾಯಿತು.

ಸೊಸೈಟಿಗಳು ರೈತರ ಸಾಲಕ್ಕಾಗಿ ರೈತರ ಮನೆಗಳನ್ನು ಮಳೆಗಾಲದಲ್ಲಿ ಜಪ್ತಿಮಾಡಿ ಬೇಸಾಯದ ಉಪಕರಣಗಳಾದ ಎತ್ತು, ಹೋರಿ, ಬೀಜಕ್ಕಿಟ್ಟ ಭತ್ತ, ಊಟಕ್ಕಿಟ್ಟ ಅಕ್ಕಿಯನ್ನೂ ಬಿಡದೆ ಕೊಂಡುಹೋಗಿ ಏಲಂ ಮಾಡುವುದನ್ನು ತೀವ್ರವಾಗಿ ಖಂಡಿಸಿ, ಇದರಿಂದ ಸಾಗುವಳಿಗೆ ತೊಂದರೆಯಾಗುವುದನ್ನು ಮನಗಾಣಬೇಕೆಂದು ಸಂಬಂಧಪಟ್ಟ ನೌಕರಶಾಹಿ ಅಧಿಕಾರಿಗಳಿಗೆ ಸರಿಯಾದ ನಿರ್ದೇಶನ ನೀಡುವ ಮೂಲಕ ಈ ಕ್ರಮಗಳನ್ನು ನಿಲ್ಲಿಸಲು ಸರಕಾರವನ್ನು ಒತ್ತಾಯಿಸಲಾಯಿತು.

ಹಳ್ಳಿಯ ಬಡಜನತೆಯ ಸಂಘಟನೆ ಬೆಳೆಸಲು ಗ್ರಾಮಮಟ್ಟದಲ್ಲಿ ರೈತರ ಸಮಿತಿಗಳನ್ನು ಬೆಳೆಸುವಂತೆ, ಸಂಘಟನೆ ವಿಸ್ತರಿಸಲು ತಾ.30.8.79 ರಂದು ತಾಲ್ಲೂಕಿನ ಪ್ರತಿನಿಧಿಗಳ ಸಮಾವೇಶವನ್ನು ಕರೆಯಲು ತೀರ್ಮಾನಿಸಲಾಯ್ತು. ●

ಬೀಡಿ ಕೆಲಸಗಾರರ ಮಹಾಸಭೆ

ದ.ಕ.ಜಿಲ್ಲಾ ಬಂಟ್ವಾಳ ತಾಲ್ಲೂಕು ಬೀಡಿ ಕೆಲಸಗಾರರ ಸಂಘದ 3 ನೇ ಮಹಾಸಭೆಯು ಸಂಘದ ಉಪಾಧ್ಯಕ್ಷ ಕಾಂ.ನಕ್ಕುರ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಸಂಘದ ಆಫೀಸಿನಲ್ಲಿ ತಾ. 29.7.79 ರಂದು ಜರುಗಿತು. ಸಂಘದ ಕಾರ್ಯದರ್ಶಿ ಕಾಂ.ಬಿ.ನಾರಾಯಣರವರು ಸ್ವಾಗತಿಸಿದ ಬಳಿಕ ಗತವರ್ಷದ ವರದಿ ಮತ್ತು ಲೆಕ್ಕಪತ್ರಗಳನ್ನು ಸಭೆಯ ಮುಂದೆ ಓದಿ ಹೇಳಿದರು. ಸಭೆಯು ಸರ್ವಾನುಮತಿಯಿಂದ ಲೆಕ್ಕಪತ್ರವನ್ನು ಮಂಜೂರು ಮಾಡಿತು. 1979-80 ನೇ ವರ್ಷಕ್ಕೆ ಕಾಂ. ಬಿ.ಎಚ್. ಭಂಗೇರ ಅಧ್ಯಕ್ಷರಾಗಿಯೂ, ಕಾಂ.ಬಿ.ಸಂಜೀವ ಭಂಗೇರ ಉಪಾಧ್ಯಕ್ಷರಾಗಿಯೂ, ಕಾರ್ಯದರ್ಶಿಯಾಗಿ ಕಾಂ. ಬಿ.ನಾರಾಯಣನವರನ್ನೂ, ಜತೆಕಾರ್ಯದರ್ಶಿಯಾಗಿ ಕಾಂ.ಬಿ.ಗೋಪಾಲಗೌಡರನ್ನೂ, ಕೋಶಾಧಿಕಾರಿಯಾಗಿ ಕಾಂ. ಬಿ.ಮಂಜುನಾಥ ಸಪಲಿಗರನ್ನೂ ಬಹುಮತದಿಂದ ಆರಿಸಲಾಯಿತು. ಸಂಘದ ಸದಸ್ಯರನ್ನುದ್ದೇಶಿಸಿ ಕಾಂ.ಕೆ.ಮೂಸಬ್ಬನವರು ಮಾತನಾಡುತ್ತಾ, ಪ್ರಾವಿಡೆಂಟ್ ಫಂಡಿನ ಬಗ್ಗೆ ಪ್ರತಿ ಕಾರ್ಮಿಕನಿಗೂ ವೇಜ್‌ಸ್ಲಿಪ್‌ನ್ನು ಕೂಡಲೇ ಕೊಡಬೇಕೆಂದೂ, ಸರಕಾರ ಬೀಡಿ ಕಾರ್ಮಿಕರಿಗೆ ನಿಗದಿ ಮಾಡಿದ 5.75 ಕನಿಷ್ಟ ಕೂಲಿ ಇವತ್ತಿನ ಜೀವನಾವಶ್ಯಕ ಸಾಮಗ್ರಿಗಳ ಬೆಲೆ ಏರಿರುವುದರಿಂದ ಏನೂ ಸಾಲದೆಂದೂ, ಕನಿಷ್ಟ ಕೂಲಿಯನ್ನು ಪುನರ್‌ವಿಮರ್ಶೆ ಮಾಡಿಸುವುದಕ್ಕೆ ಸರಕಾರವನ್ನು ಒತ್ತಾಯ ಮಾಡಲು ಹೆಚ್ಚಿನ ಸಂಖ್ಯೆಯಲ್ಲಿ ಬೀಡಿ ಕಾರ್ಮಿಕರು ಸಂಘಟಿತರಾಗಬೇಕೆಂದೂ ಕರೆ ನೀಡಿದರು. ಲಘುಉಪಹಾರವಾದ ನಂತರ ಧನ್ಯವಾದಗಳೊಂದಿಗೆ ಸಭೆ ಮುಕ್ತಾಯವಾಯಿತು. ●

ಆರ್ಥಿಕ ಸಮೀಕ್ಷೆ :

[3ನೇ ಪುಟದಿಂದ]

ಬರುವುದು ಕಡಿಮೆಯಾಗುವುದು. ವ್ಯಾಪಾರಿಗಳ ವ್ಯವಹಾರ ಕಡಿಮೆಯಾಗುವುದು, ಅವರ ಲಾಭವೂ ಕಡಿಮೆಯಾಗುವುದು. ಬೆಲೆಗಳು ಇಳಿಮುಖವಾಗುವುದರಿಂದ ಅವರ ಲಾಭವು ಮತ್ತಷ್ಟೂ ಕಡಿಮೆಯಾಗುವುದು. ಭೂಮಾಲಕರ ಹಾಗೂ ಶ್ರೀಮಂತ ರೈತರ ಮತ್ತು ವ್ಯಾಪಾರಿಗಳ ನೆರವಿನಿಂದ ನಡೆಯುವ ಬಂಡವಾಳಶಾಹಿ ಸರಕಾರ ಮಾರುಕಟ್ಟೆಯಲ್ಲಿ 'ಕೆಲಸಕ್ಕೆ-ಕಾಳು' ಕಾರ್ಯಕ್ರಮದಿಂದ ಆಹಾರ ಧಾನ್ಯಗಳ ಬೆಲೆ ಇಳಿಮುಖವಾಗಲು ಖಂಡಿತವಾಗಿಯೂ ಬಿಡಲಾರದು. ಅದಕ್ಕಾಗಿಯೇ, ಇತ್ತೀಚೆಗೆ 'ಕೆಲಸಕ್ಕೆ-ಕಾಳು' ಕಾರ್ಯಕ್ರಮದಲ್ಲಿ ಕೂಲಿಯ ರೂಪದಲ್ಲಿ ಹಂಚುವ ಗೋದಿಯ ಬೆಲೆ ಕ್ವಿಂಟಾಲಿಗೆ ರೂ. 100 ರಿಂದ ರೂ. 120ಕ್ಕೆ ಏರಿಸಲಾಯಿತು! ಇದರಿಂದಾಗಿ, ನಿಶ್ಚಿತ ಕೂಲಿಯಲ್ಲಿ ಇನ್ನು ಮುಂದೆ ಸಿಗುವ ಆಹಾರಧಾನ್ಯಗಳ ಪ್ರಮಾಣ ಕಡಿಮೆ ಆಗುವುದು.

ಕೂಲಿದರ ಇಳಿಯಬೇಕು !

ಕೂಲಿ ಕಡಿಮೆ ಆದಷ್ಟೂ ಲಾಭ ಹೆಚ್ಚುವುದು ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಮತ್ತೊಂದು ನಿಯಮ. 'ಕೆಲಸಕ್ಕೆ-ಕಾಳು' ಕಾರ್ಯಕ್ರಮದಿಂದ ಗ್ರಾಮೀಣ ಕಾರ್ಮಿಕರ ಉದ್ಯೋಗಾವಕಾಶ ಹೆಚ್ಚಿ ಕೂಲಿದರವೂ ಹೆಚ್ಚಿತೆಂಬ ಹೆದರಿಕೆಯಿಂದ ಹೆಚ್ಚಿನ ರಾಜ್ಯಸರಕಾರಗಳು ಈ ಕಾರ್ಯಕ್ರಮದಲ್ಲಿನ ಕೂಲಿದರವನ್ನು ಪ್ರಚಲಿತ ಕೂಲಿದರಕ್ಕಿಂತ ಕಡಿಮೆಯಾಗಿಯೇ ನಿರ್ಧರಿಸುತ್ತವೆ. ಭೂಮಾಲಕರಿಗೆ ಮತ್ತು ಶ್ರೀಮಂತರಿಗೆ ವ್ಯವಸಾಯದ ಸಮಯ ಸಾಕಷ್ಟು ಗ್ರಾಮೀಣ ಕಾರ್ಮಿಕರು ಆದಷ್ಟು ಕಡಿಮೆ ಕೂಲಿಗೆ ಸಿಗುವಂತೆ, ಆ ಸಮಯದಲ್ಲಿ 'ಕೆಲಸಕ್ಕೆ-ಕಾಳು' ಕಾರ್ಯಕ್ರಮವನ್ನು ನಿಲ್ಲಿಸಲಾಗುವುದು. ಗ್ರಾಮೀಣ ಕಾರ್ಮಿಕರು, ಮುಖ್ಯವಾಗಿ ಕೃಷಿಕಾರ್ಮಿಕರು ಸಂಘಟಿತರಾಗಿ ಎಲ್ಲಿ ಕೂಲಿ ಹೆಚ್ಚಳಕ್ಕಾಗಿ ಹೋರಾಟ ಮಾಡುತ್ತಾರೋ ಎಂದು ಹೆಚ್ಚಿನ ರಾಜ್ಯಸರಕಾರಗಳು ಸದಾ ಜಾಗ್ರತೆವಹಿಸಿ, ಆದಷ್ಟು ಅದಕ್ಕೆ ಅವಕಾಶ ಕೊಡದೆ ಭೂಮಾಲಕರ ಹಾಗೂ ಶ್ರೀಮಂತ ರೈತರ ಹಿತಾಸಕ್ತಿಗಳನ್ನು ಕಾಪಾಡುತ್ತವೆ. 1974-75ರ ಗ್ರಾಮೀಣ ಕಾರ್ಮಿಕ ವಿಚಾರಣಾ ವರದಿಯಂತೆ, ಗ್ರಾಮೀಣ ಕೃಷಿಕಾರ್ಮಿಕರ ನಿಜವಾದ ದೈನಿಕ ಸರಾಸರಿ ಗಳಿಕೆಯು 1964-65 ರಿಂದ 1974-75ರ ಅವಧಿಯಲ್ಲಿ ಗಣನೀಯವಾಗಿ ಕಡಿಮೆಯಾಗಿದೆ. ಹಸಿರು ಕ್ರಾಂತಿಯ ಪರ್ವಕಾಲದಲ್ಲಿಯೇ ಇದು ಸಂಭವಿಸಿರಬೇಕಾದರೆ, ಗ್ರಾಮೀಣ ನಿರುದ್ಯೋಗಿಗಳ ಭಾರೀ ಪಡೆಯಿರುವುದರಿಂದಲೇ ಇದು ಸಾಧ್ಯವಾಯಿತು. ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ ನಿರುದ್ಯೋಗ ಪರಿಸ್ಥಿತಿಯನ್ನು ಬದಲು ಮಾಡಲಿಕ್ಕೂ ಕಾರ್ಮಿಕರ ಕೂಲಿ ಹೆಚ್ಚಿಸಲಿಕ್ಕೂ ಇಷ್ಟವಿಲ್ಲ. ಪ. ಬಂಗಾಳ ಹಾಗೂ ತ್ರಿಪುರಾ ರಾಜ್ಯಗಳ ಎಡರಂಗ ಸರಕಾರವು 'ಕೆಲಸಕ್ಕೆ-ಕಾಳು' ಕಾರ್ಯಕ್ರಮಗಳಿಂದ ಗ್ರಾಮೀಣ ಹಾಗೂ ನಗರಗಳಲ್ಲಿನ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗಾದರೂ ನಿವಾರಿಸುವ ಪ್ರಯತ್ನವನ್ನೂ, ಬಡಕೂಲಿಕಾರರ ವೇತನ ಹಾಗೂ ಜೀವನಮಟ್ಟವನ್ನು ಕಿಂಚಿತ್ತಾದರೂ ಸುಧಾರಿಸುವ ಪ್ರಯತ್ನವನ್ನೂ ಸಹಜವಾಗಿಯೇ ಭೂಮಾಲಕ ಬಂಡವಾಳಶಾಹಿ ಪ್ರತಿನಿಧಿತವಾದ ಜನತಾ ಸರಕಾರವೂ ಹೆಚ್ಚಾಗಿ ಪ್ರೋತ್ಸಾಹಿಸಲಾರದು.

ದುಡಿಯುವರ ಮೇಲೆ ದುಃಸ್ಥಿತಿಯ ಭಾರ :

ಆದುದರಿಂದ, 'ಕೆಲಸಕ್ಕೆ-ಕೂಲಿ' ಕಾರ್ಯಕ್ರಮವನ್ನು ಈಗಿನ ಮಟ್ಟದಲ್ಲಿ ಸ್ಥಗಿತಗೊಳಿಸಿ, ಮುಂದೆ ಹೆಚ್ಚು ವಿಸ್ತರಿಸಲು ಪ್ರೋತ್ಸಾಹ ಕೊಡುವುದಕ್ಕೆ ಆಹಾರಧಾನ್ಯಗಳ ಬೆಲೆಗಳು ಇಳಿಮುಖವಾಗಬಾರದೆಂಬ ಮತ್ತು ಕೂಲಿಕಾರರ ವೇತನಮಟ್ಟ ಹೆಚ್ಚಾಗಬಾರದೆಂಬ ಕಾರಣವೇ ಹೊರತು ಬೆಲೆಏರಿಕೆ ಹಾಗೂ ಹಣದುಬ್ಬರವನ್ನು ತಡೆಯುವ ಉದ್ದೇಶವಲ್ಲ ಎಂದು ಸ್ಪಷ್ಟವಾದಂತಾಯಿತು. ಕೈಗಾರಿಕಾ ಕಾರ್ಮಿಕರಿಗೆ, ರೈಲ್ವೆ ಮತ್ತಿತರ ನೌಕರರಿಗೆ ಬೋನಸ್ ಕೊಡದಿರುವುದೂ, ಕಡ್ಡಾಯ ಠೇವಣಿಯ ಕಂತುಗಳನ್ನು ಈ ವರುಷ ಮರುಪಾವತಿ ಮಾಡದಿರುವಂತೆ ಸುಗ್ರೀವಾಜ್ಞೆ ಹೊರಡಿಸಿರುವುದೂ, ವೇತನ ಹೆಚ್ಚಳಕ್ಕೆ ಮಾಲಕರೂ, ಸರಕಾರವೂ ವಿರೋಧಿಸುತ್ತಿರುವುದೂ, ಪೋಲೀಸರ ಕಾರ್ಮಿಕರ ಹಾಗೂ ರೈತರ ಸಂಘಟಿತ ಹೋರಾಟಗಳನ್ನು ಹತ್ತಿಕ್ಕುತ್ತಿರುವುದೂ, ಕೈಗಾರಿಕಾ ಸಂಬಂಧಗಳ ಮಸೂದೆಯ ಮೂಲಕ ಅವರ ಸಂಘಟನಾ ಸ್ವಾತಂತ್ರ್ಯಕ್ಕೆ ಮುಟ್ಟುಗೋಲು ಹಾಕುತ್ತಿರುವುದೂ ಏಕೈಕ ಉದ್ದೇಶದಿಂದ ಬಂಡವಾಳಶಾಹಿ ಆರ್ಥಿಕ ದುಃಸ್ಥಿತಿಯ ದುಷ್ಪರಿಣಾಮಗಳನ್ನೆಲ್ಲಾ ದುಡಿಯುವ ಜನರ ಹೆಗಲಿಗೇರಿಸುವುದೇ ಈ ಧೋರಣೆಗಳ ಉದ್ದೇಶವಾಗಿದೆ. ಈ ವಿಷಯದಲ್ಲಿ ಹಿಂದಿನ ಕಾಂಗ್ರೆಸ್ ಸರಕಾರಕ್ಕೂ ಈಗಿನ ಜನತಾ ಸರಕಾರಕ್ಕೂ ವ್ಯತ್ಯಾಸವಿಲ್ಲ. ●

ಕುದುರೆಮುಖ ಕನ್‌ಸ್ಟ್ರಕ್ಷನ್ ಕಾರ್ಮಿಕರ ಹೋರಾಟದ ಅಮೋಘ ವಿಜಯ

ಸಿ. ಐ. ಟಿ. ಯು. ನೇತೃತ್ವದಲ್ಲಿ ಇತ್ತೀಚೆಗೆ ಸ್ಥಾಪನೆಯಾಗಿರುವ ಕುದುರೆಮುಖ ಕನ್ಸಸ್ಟ್ರಕ್ಷನ್ ಕಾರ್ಮಿಕರ ಸಂಘವು ಈ ಯೋಜನೆಯಲ್ಲಿ ಪ್ರಮುಖ ಕಂಟ್ರಾಕ್ಟುದಾರರಾಗಿರುವ ಇಂಜಿನಿಯರಿಂಗ್ ಕನ್ಸಸ್ಟ್ರಕ್ಷನ್ ಕಾರ್ಪೊರೇಶನ್ (ಲಿ)ನ ಆಡಳಿತಗಾರರು ತಮ್ಮ ಕಾರ್ಮಿಕರ ವೇತನ ಮತ್ತು ಇತರ ಸವಲತ್ತುಗಳ ಬಗ್ಗೆ ತಾ.3.8.79 ರಂದು ಒಪ್ಪಂದಕ್ಕೆ ಬರುವಂತೆ ಮಾಡುವ ಮೂಲಕ ಅಮೋಘ ವಿಜಯವೊಂದನ್ನು ಸಾಧಿಸಿದೆ.

ಕುದುರೆ ಮುಖ ಕಬ್ಬಿಣ ಅದುರು ಕಂಪೆನಿಯ ಆಡಳಿತಗಾರರು ತಮ್ಮಲ್ಲಿ ಮುಖ್ಯ ಕಂಟ್ರಾಕ್ಟರುಗಳಾಗಿರುವವರನ್ನು ಶಿಸ್ತಿಗೆ ಒಳಪಡಿಸುವಂತೆ ಮಾಡುವಲ್ಲಿ ಯಾವುದೇ ಆಸಕ್ತಿ ತೋರಿಸದ ಕಾರಣ ಕಾರ್ಮಿಕರು ತಮ್ಮ ವೇತನ ಏರಿಕೆ ಹಾಗೂ ಇತರ ಸೌಲಭ್ಯಗಳಿಗಾಗಿ ಹೋರಾಟ ಮಾಡುವುದು ಅನಿವಾರ್ಯವಾಯಿತು. ತಾ.30.7.79 ರಂದು ಕಾರ್ಮಿಕ ಇಲಾಖೆಯ ಅಧಿಕಾರಿಗಳ ಮುಂದೆ ನಡೆದ ರಾಜಿ ಪಂಚಾತಿಕೆ

[7ನೇ ಪುಟ ನೋಡಿ]

ಪ್ರಾವಿಡೆಂಟ್ ಫಂಡಿನ ಹಣವನ್ನು ಕೂಡಲೇ ಪಾವತಿ ಮಾಡಲು ಒತ್ತಾಯ

ತಾ.30.7.79 ರಂದು ಜರುಗಿದ ಸೌತ್ ಕೆನರಾ ಬೀವರ್ಸ್ ಯೂನಿಯನ್ನಿನ 40 ನೇ ವಾರ್ಷಿಕ ಮಹಾಸಭೆಯಲ್ಲಿ ಮಜೂರರಿಗೆ ಪ್ರಾವಿಡೆಂಟ್ ಫಂಡಿನ ಹಣವನ್ನು ಪಾವತಿ ಮಾಡಲು ಕಾಲ ವಿಳಂಭ ಮಾಡುವ ಡಿಪಾರ್ಟ್‌ಮೆಂಟಿನ ನೀತಿಯನ್ನು ಖಂಡಿಸಿ ಸಕಾಲದಲ್ಲಿ ಪಾವತಿ ಮಾಡುವಂತೆ ಒತ್ತಾಯಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ.ಮೂಸಬ್ಬನವರು ವಹಿಸಿದ್ದರು. ಪ್ರಾರಂಭದಲ್ಲಿ ಕಾರ್ಯದರ್ಶಿ ಕೆ. ಪೂವಪ್ಪಸಾಲಿಯನರು ಸ್ವಾಗತಿಸಿದರು. ಆನಂತರ ಸಭೆಯು ಯೂನಿಯನ್ನಿನ ಸದಸ್ಯರಾಗಿದ್ದು ನಿಧನರಾದ ಬಿ.ಚಂದಪ್ಪಶೆಟ್ಟಿ, ಬಿ. ಎಸ್. ಕೋಟ್ಯಾನ್, ಕೃಷ್ಣಗೌಡ, ಜೆ.ಮೋನಪ್ಪ ಮತ್ತು ಲಕ್ಷಣ ಬಂಗೇರ ಇವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿತು.

ಗತ ವರ್ಷದ ವರದಿಯನ್ನು ಮತ್ತು ಲೆಕ್ಕಪತ್ರವನ್ನು ಕಾರ್ಯದರ್ಶಿಯವರು ಸಭೆಯ ಮುಂದಿಟ್ಟರು.

ಆಹಾರ ಸಾಮಗ್ರಿಗಳ ಬೆಲೆಯನ್ನು ಸರಕಾರ ಹತೋಟಿಗೆ ತರುವಂತೆ ಒತ್ತಾಯಿಸುವ, ನೂಲು ಮತ್ತು ಬಣ್ಣ ಕಡಿಮೆ ದರದಲ್ಲಿ ಕೈಮಗ್ಗಗಳಿಗೆ ಸರಕಾರ ಕೊಡಬೇಕೆಂದು ಒತ್ತಾಯಿಸುವ ಠರಾವುಗಳು ಸಭೆಯಲ್ಲಿ ಮಂಜೂರಾಯಿತು.

ಕಾಂ.ಕೆ.ತಿಮ್ಮಪ್ಪನವರು ಅಧ್ಯಕ್ಷರಾಗಿ, ಕಾಂ.ಕೆ.ಪೂವಪ್ಪಸಾಲಿಯನ್ ಪ್ರಧಾನ ಕಾರ್ಯದರ್ಶಿಯಾಗಿ ಇರುವ 21 ಮಂದಿಯ ಆಡಳಿತ ಕಮಿಟಿಯನ್ನು ಆರಿಸಲಾಯಿತು. ಧನ್ಯವಾದದೊಂದಿಗೆ ಸಭೆಯು ಮುಕ್ತಾಯಗೊಂಡಿತು. ○

ದ.ಕ. ಜಿಲ್ಲಾ ರೈತಸಂಘದ ಸಭೆ

ದ. ಕ. ಜಿಲ್ಲಾ ರೈತಸಂಘದ ಕಾರ್ಯಕಾರಿ ಸಮಿತಿಯ ಸಭೆಯು ಬೋಳಾರದಲ್ಲಿ ಕಾಂ. ಅಬ್ರಹಾಂ ಕರ್ಕಡರ ಅಧ್ಯಕ್ಷತೆಯಲ್ಲಿ 1-8-79 ರಂದು ಜರಗಿತು. ಸಮಿತಿಯು ಹಳಿಯಾಳದ ಗೋಲಿಬಾರಿನಲ್ಲಿ ಮಡಿದವರ ಕುಟುಂಬದ ಸಹಾಯಾರ್ಥ ನಿಧಿ ಸಂಗ್ರಹಿಸಲು ನಿರ್ಣಯವನ್ನು ಮಂಜೂರು ಮಾಡಿತು. ಜಿಲ್ಲೆಯಲ್ಲಿ ರೈತಸಂಘಕ್ಕೆ 27,500 ಸದಸ್ಯರನ್ನು ಸೇರಿಸಲು ನಿರ್ಣಯಿಸಿತು. ದರಖಾಸ್ತುಗಳ ಖಾಯಂ, ನೆರೆಸಾಲಗಳ ಮಾಫಿ, ಬೆಲೆ ಏರಿಕೆಯನ್ನು ತಡೆಯುವುದು, ಸಾಲಗಳ ವಸೂಲಾತಿಯ ಬಗ್ಗೆ ಜಪ್ತಿಗಳನ್ನು ನಡೆಸದಂತೆ ಜಿಲ್ಲಾದ್ಯಂತ ಕೂಡಲೇ ಪ್ರದರ್ಶನ, ಮುಷ್ಕರ, ಪ್ರತಿಭಟನೆಗಳನ್ನು ನಡೆಸಲು ನಿರ್ಣಯಗಳನ್ನು ಕೈಗೊಳ್ಳಲಾಯಿತು. ಸಭೆಯ ಚರ್ಚೆಗಳಲ್ಲಿ ಕಾಂ. ರಾಮಚಂದ್ರರಾವ್, ಜನಾರ್ಧನನಾಯಕ್, ವಿಷ್ಣುಮೂರ್ತಿ, ಕೆ. ವಿ. ರಾವ್, ಮೊದಲಾದವರು ಭಾಗವಹಿಸಿದ್ದರು. ○

........ಕುದುರೆಮುಖ ಕಾರ್ಮಿಕರ ಹೋರಾಟ

[ಹಿಂದಿನ ಪುಟದಿಂದ]

(Conciliation)ಕೂಡಾ ಆಡಳಿತ ವರ್ಗದ ಹಟಮಾರಿತನದಿಂದಾಗಿ ವಿಫಲಗೊಂಡು ಕಾರ್ಮಿಕರು ಮುಷ್ಕರದ ನಿರ್ಧಾರ ಕೈಗೊಳ್ಳಬೇಕಾಯಿತು. ಮುಷ್ಕರಕ್ಕೆ ಸಿದ್ಧತೆಯಾಗಿ ತಾ.29.7.79 ರಂದು ನಡೆದ ಸಾರ್ವಜನಿಕ ಸಭೆ ಮತ್ತು ರ್‍ಯಾಲಿಯಲ್ಲಿ ಸುರಿಯುತ್ತಿರುವ ಮಳೆಯಲ್ಲೂ ಸಾವಿರಾರು ಕಾರ್ಮಿಕರು ಭಾಗವಹಿಸಿದ್ದು ಸಭೆಯನ್ನುದ್ದೇಶಿಸಿ ಕಾಂ. ವಿ.ಜೆ.ಕೆ.ನಾಯರ್ ಅವರು ಭಾಷಣ ಮಾಡಿದರು. ಇದೇ ಯೋಜನೆಯಲ್ಲಿ ದುಡಿಯುತ್ತಿರುವ ಎಚ್.ಎಸ್.ಸಿ.ಎಲ್ ಕಾರ್ಮಿಕರೂ ಸಭೆಯಲ್ಲಿ ಭಾಗವಹಿಸಿ ಇ.ಸಿ.ಸಿ.ಯ ಕಾರ್ಮಿಕರ ಹೋರಾಟಕ್ಕೆ ಬೆಂಬಲ ನೀಡಿದರು.

ತಾ.31.7.79 ರಿಂದ ನಾಲ್ಕು ದಿನಗಳ ಕಾಲ ಮುಷ್ಕರ ನಡೆದು ಇ.ಸಿ.ಸಿ.ಯ ಕೆಲಸ ಸಂಪೂರ್ಣ ಸ್ಥಗಿತಗೊಂಡಿತು. ಆಡಳಿತ ವರ್ಗದವರು ಪೋಲೀಸ್ ಹಸ್ತಕ್ಷೇಪ ನಡೆಸಿ ಮುಷ್ಕರವನ್ನು ಬಗ್ಗುಬಡೆಯಲು ಮಾಡಿದ ಪ್ರಯತ್ನಗಳೆಲ್ಲ ಕಾರ್ಮಿಕರ ಹಾಗೂ ಯೂನಿಯನ್ ಮುಂದಾಳುಗಳ ಚಾಣಾಕ್ಷತನದಿಂದಾಗಿ ವಿಫಲಗೊಂಡು ಮುಷ್ಕರವು ಸಂಪೂರ್ಣ ಯಶಸ್ವಿಯಾಗಿ ನಡೆದ ಕಾರಣ ಆಡಳಿತ ವರ್ಗದವರು ಕಾರ್ಮಿಕ ಸಂಘದೊಡನೆ ಒಪ್ಪಂದಕ್ಕೆ ಬರಲೇ ಬೇಕಾಯಿತು.

ಈ ಒಪ್ಪಂದದಂತೆ ಮೂರುತಿಂಗಳಷ್ಟು ಕಾಲ ಸೇವೆ ಸಲ್ಲಿಸಿರುವ ಎಲ್ಲಾ ಕಾರ್ಮಿಕರಿಗೂ ಶೇ. 5 ರಷ್ಟು ವೇತನದಲ್ಲಿ ಹೆಚ್ಚಳ, ವಾರದ ರಜಾದಿನಗಳಿಗೆ ಹೆಚ್ಚುವರಿ ವೇತನ, ಉಪಕಂಟ್ರಾಕ್ಟುದಾರರ ಕಾರ್ಮಿಕರನ್ನೂ ಒಳಗೊಂಡು ಎಲ್ಲ ಕಾರ್ಮಿಕರಿಗೂ ಬೋನಸ್ ಇತ್ಯಾದಿ ಸವಲತ್ತುಗಳು ಲಭಿಸಿದ್ದು ಇವುಗಳ ಒಟ್ಟು ಮೊತ್ತ ಸುಮಾರು ರೂ.7 ಲಕ್ಷದಷ್ಟಾಗಲಿದೆ, ಇ.ಸಿ.ಸಿ. ಕಾರ್ಮಿಕರ ಈ ವಿಜಯವು ಕುದುರೆ ಮುಖ ಅದುರು ಯೋಜನೆಯಲ್ಲಿನ ಇತರ ಎಲ್ಲಾ ಕಾರ್ಮಿಕರಲ್ಲೂ ಹೊಸ ಚೈತನ್ಯವನ್ನುಂಟು ಮಾಡಿದೆಯಲ್ಲದೆ ಕನ್ಸಸ್ಟ್ರಕ್ಷನ್ ಕಾರ್ಮಿಕರ ಐಕ್ಯವನ್ನೂ ಇನ್ನಷ್ಟು ಬಲಪಡಿಸಲಿದೆ. ●

ಅರಣ್ಯಾಧಿಕಾರಿಗಳಿಗೆ ಮನವಿ

ಹಳಿಯಾಳ ತಾಲ್ಲೂಕಿನ ರೈತ-ಕೂಲಿಕಾರರ ಸಂಘವು ಹುನ್ಸವಾಡ ಗ್ರಾಮದಲ್ಲಿ 24-7-79 ರಂದು ಸಭೆ ಸೇರಿತ್ತು. ಹುನ್ಸವಾಡ ಗ್ರಾಮದ ದನಕರುಗಳು ಮೇಯಲು ಹೋಗುವ ದಾರಿಯಲ್ಲಿ ಇರುವ ತೊಂದರೆಯಿಂದ ದನಕರುಗಳಿಗೆ ಮತ್ತು ರೈತರಿಗೆ ಅತೀವ ತೊಂದರೆಯಾಗಿದ್ದು, ಅನೇಕ ಜಾನುವಾರುಗಳು ಈ ದಾರಿಯ ಹಳ್ಳದಲ್ಲಿ ಬಿದ್ದು ಪ್ರಾಣನೀಗಿವೆ. ಈ ಬಗ್ಗೆ ಸರ್ಕಾರವು ಗಮನಹರಿಸಿ ಈ ಸಮಸ್ಯೆಯನ್ನು ಪರಿಹರಿಸಬೇಕಾಗಿದೆ. ಸರ್ಕಾರವು ಇದಕ್ಕೆ ಗಮನಕೊಡದಿದ್ದರೆ ಹೋರಾಟ ನಡೆಸಲಾಗುವುದೆಂದು ಸಭೆ ತೀರ್ಮಾನಿಸಿತು. ಈ ಬಗ್ಗೆ ಡಿವಿಜನಲ್ ಫಾರೆಸ್ಟ್ ಆಫೀಸರ್ ಅವರಿಗೆ ಮನವಿ ಕಳುಹಿಸಲಾಗಿದೆ. ○

ಮುಳಬಾಗಿಲಿನಲ್ಲಿ ರೈತ ಮುಖಂಡರ ಸಭೆ

ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ತಾ.29.7.79 ಭಾನುವಾರ ಮಧ್ಯಾಹ್ನ 2 ಗಂಟೆಗೆ ಕಾಂ.ಆರ್.ವೆಂಕಟರಾಮಯ್ಯನವರ ಮುಖಂಡತ್ವದಲ್ಲಿ ರೈತ ಕಾರ್ಯಕರ್ತರ ಸಭೆ ಏರ್ಪಡಿಸಲಾಗಿತ್ತು. ತಾಲೂಕಿನ ಸುಮಾರು ಎಂಭತ್ತು ಜನ ರೈತ ಮತ್ತು ಕೃಷಿ ಕಾರ್ಮಿಕ ಕಾರ್ಯಕರ್ತರು ಭಾಗವಹಿಸಿದ್ದರು. ಪ್ರಾಂತ ರೈತ ಸಂಘದ ಅಧ್ಯಕ್ಷ ಕಾಂ. ಹೆಚ್. ಮುಗುವಾಳಪ್ಪ ಮತ್ತು ಕಾರ್ಯಕಾರಿಸಮಿತಿ ಸದಸ್ಯ ಕಾಂ.ಆರ್. ವೆಂಕಟರಾಮಯ್ಯನವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಮುಳಬಾಗಿಲು ಟೌನಿನಲ್ಲಿ ತಾಲೂಕು ರೈತ ಸಂಘದ ಆಫೀಸ್ ತೆರೆದು, ಪೂರ್ಣಕಾಲದ ಕಾರ್ಯಕರ್ತರೊಬ್ಬರನ್ನು ನೇಮಕ ಮಾಡಿಕೊಂಡು ರೈತ ಸಂಘಟನೆಯನ್ನು ಪ್ರಬಲವಾಗಿ ಬೆಳೆಸಬೇಕೆಂಬ ತೀರ್ಮಾನ ತೆಗೆದುಕೊಳ್ಳಲಾಯಿತು.

ತಾ. 10. 8. 79 ರಂದು ತಾಲೂಕಿನ ಬೈರಕೂರು ಗ್ರಾಮದಲ್ಲೂ,12.8.79 ದೂಲಪಲ್ಲಿಯಲ್ಲೂ,18.8.79 ರಂದು ಹಾಲಂಗೂರಿನಲ್ಲೂ, 19.8.79ರಂದು ಮುಡಿಯನೂರಿನಲ್ಲೂ, 23. 8. 79 ರಂದು ಕೀಲಂಗಾಣಿಯಲ್ಲೂ ರೈತ ಕಾರ್ಯಕರ್ತರ ಸಭೆ ಸೇರಿಸಲು ಸಭೆಯಲ್ಲಿ ಹಾಜರಿದ್ದ ಸ್ಥಳದ ರೈತ ಮುಖಂಡರು ತೀರ್ಮಾನಿಸಿರುತ್ತಾರೆ. ●

ಎಸ್. ಎಫ್. ಐ. ರಾಜ್ಯ ಸಮಿತಿ ನಿಧಿಗೆ ಉದಾರ ಧನ ಸಹಾಯ ನೀಡಿ

ಆಗಸ್ಟ್ ತಿಂಗಳಿನಿಂದ, ಸೆಪ್ಟಂಬರ್ ಕೊನೆಯ ವೇಳೆಗೆ ರಾಜ್ಯಸಮಿತಿಗೆ ಹತ್ತುಸಾವಿರ ರೂಪಾಯಿಗಳ ನಿಧಿ ಸಂಗ್ರಹಿಸಲು ರಾಜ್ಯಸಮಿತಿ ನಿರ್ಧರಿಸಿದೆ. ಎಡ ಮತ್ತು ಪ್ರಜಾಪ್ರಭುತ್ವವಾದಿಗಳು, ಹಿತೈಷಿಗಳು ಹಾಗೂ ಸಾರ್ವಜನಿಕರು ಸಹಾಯ ಮಾಡುವುದರ ಮೂಲಕ ರಾಜ್ಯದಲ್ಲಿ ಬಲಿಷ್ಟ ಎಡ ವಿದ್ಯಾರ್ಥಿ ಚಳುವಳಿಯನ್ನು ಕಟ್ಟಲು ನೆರವಾಗಬೇಕೆಂದು ವಿನಂತಿ.

......ಪತ್ರಿಕಾಗೋಷ್ಠಿ

[2ನೇ ಪುಟದಿಂದ]

ರೊಳಗೆ ಸಲ್ಲಿಸುವಂತೆ ಪ್ರಕಟಣೆ ಹೊರಡಿಸಿತ್ತು. ಆದರೆ ರಾಜ್ಯಪತ್ರದಲ್ಲಿ ಮಾತ್ರ ಪ್ರಕಟಗೊಂಡ ಇದು ಕಾರ್ಮಿಕರಿಗಾಗಲಿ, ಕಾರ್ಮಿಕ ಸಂಘಟನೆಗಳ ಗಮನಕ್ಕಾಗಲೀ ಇದುವರೆಗೆ ಬರದೆ ಇದ್ದು, ಕಾರ್ಮಿಕ ಇಲಾಖೆ ಸಹ ಇಂಥ ಪ್ರಮುಖ ವಿಷಯದ ಬಗ್ಗೆ ಮೌನವಹಿಸಿದೆ. ಇದನ್ನು ಕ್ರಿಯಾಸಮಿತಿ ಖಂಡಿಸಿತು. ಸಲಹೆ, ಅಹವಾಲುಗಳನ್ನು ತಿಳಿಸಲು ಅವಧಿಯನ್ನು ಮತ್ತಷ್ಟು ಕೊಡಬೇಕೆಂದು ಸಮಿತಿಯು ರಾಜ್ಯ ಸರ್ಕಾರಕ್ಕೆ ವಿನಂತಿ ಮಾಡಿದೆ.

ಹೋಟೆಲ್ ಕಾರ್ಮಿಕರ ಸಂಘಗಳ ಪ್ರತಿನಿಧಿಗಳ ಸಮ್ಮೇಳನ ಆಗಸ್ಟ್ ಐದರಂದು ನಡೆದಿದ್ದು, ಆಗಸ್ಟ್ ಹದಿನೈದರಂದು ಸಾಂಕೇತಿಕ ಮುಷ್ಕರ ನಡೆಯಲಿದೆ. ○

ರಾಜ್ಯದ ವಿದ್ಯಾರ್ಥಿ - ಯುವಜನತೆ ಹಾಗೂ ಎಲ್ಲಾ ಪ್ರಜಾಪ್ರಭುತ್ವವಾದಿಗಳು ಸಹಕರಿಸಿ, ಕಾರ್ಯಕ್ರಮ ಯಶಸ್ವಿಯಾಗುವಂತೆ ಮಾಡಬೇಕೆಂದು, ರಾಜ್ಯ ಸಮಿತಿ ವಿನಂತಿಸುತ್ತದೆ. ○

ಕೋಮುವಾದಿ ಮತ್ತು ಸರ್ವಾಧಿಕಾರಿ ವಿರೋಧಿ ಸಪ್ತಾಹ

ಆಗಸ್ಟ್ 8 ರಿಂದ 15ರ ವರೆಗೆ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್. ಎಫ್.ಐ.) ದೇಶದಾದ್ಯಂತ ಕೋಮುವಾದಿ ಮತ್ತು ಸರ್ವಾಧಿಕಾರಿ ವಿರೋಧಿ ಸಪ್ತಾಹವನ್ನು ಆಚರಿಸುತ್ತಿದ್ದು, ಕರ್ನಾಟಕದಲ್ಲೂ ಈ ಸಪ್ತಾಹವನ್ನು ಆಚರಿಸಲು ಸಿದ್ಧತೆಗಳನ್ನು ನಡೆಸಲಾಗುತ್ತಿದೆ. ರಾಜ್ಯದ ಎಲ್ಲಾ ಶಾಖೆಗಳು ಆಗಸ್ಟ್ 8 ರಿಂದ 15ರ ವರೆಗೆ ಗೋಡೆ ಬರಹ, ಕೈಬರಹದ ಪೋಸ್ಟರ್ಸ್, ಕರಪತ್ರಗಳ ಮೂಲಕ ಪ್ರಚಾರ ನಡೆಸಬೇಕು.ಆಗಸ್ಟ್ 15ರಂದು ವಿದ್ಯಾರ್ಥಿಗಳನ್ನು ಸಂಘಟಿಸಿ ಮತಪ್ರದರ್ಶನ ಬಹಿರಂಗ ಸಭೆಗಳನ್ನು ಏರ್ಪಡಿಸಬೇಕು.

ಈ ಸಂದರ್ಭದಲ್ಲಿ ಜುಲೈ 31ರಂದು ತಿಪಟೂರಿನಲ್ಲಿ ಎಸ್. ಎಫ್. ಐ. ಮುಖಂಡ ಕಾಂ.ಚೆನ್ನಬಸವಣ್ಣ ಮತ್ತಿತರ ಕಾರ್ಯಕರ್ತರ ಮೇಲೆ ಆರ್.ಎಸ್.ಎಸ್. ಮತ್ತು ವಿದ್ಯಾರ್ಥಿ ಪರಿಷತ್ ಗೂಂಡಾಗಳು ನಡೆಸಿದ ಹಲ್ಲೆಯನ್ನು ಮುಖ್ಯವಾಗಿ ಖಂಡಿಸಿ, ಈ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆಯಾಗಿ ಸಮಾಜಘಾತುಕ ಶಕ್ತಿಗಳಿಗೆ ಕೂಡಲೇ ಶಿಕ್ಷೆ ನೀಡಬೇಕೆಂದು ಒತ್ತಾಯಿಸಬೇಕು. ತಿಪಟೂರಿನಲ್ಲಿ ಆಗಸ್ಟ್ 14 ರಂದೇ ಈ ಕಾರ್ಯಕ್ರಮ ನಡೆಸಲು ಏರ್ಪಾಡುಗಳನ್ನು ಮಾಡಲಾಗುತ್ತಿದೆ.

ಕೈಗಾರಿಕಾ ವಿವಾದ ತೀರ್ಮಾನ

ದ.ಕ.ಜಿಲ್ಲಾ ಕುಂದಾಪುರದ ಮುಖಾಂಬಿಕಾ ಹಂಚಿನ ಕಾರ್ಖಾನೆಯ ಮಾಲಕರ ಮತ್ತು ಕಾರ್ಮಿಕರ ನಡುವಣ ಕೈಗಾರಿಕಾ ವಿವಾದವು ಜುಲೈ 25 ರಂದು ಮಂಗಳೂರಿನ ಕಾರ್ಮಿಕ ಅಧಿಕಾರಿ ಶ್ರೀ.ಟಿ.ಬಿ.ಗುರುನಂಜಯ್ಯ ಅವರ ಮಧ್ಯಸ್ತಿಕೆಯಲ್ಲಿ ಕುಂದಾಪುರ ಕಾರ್ಮಿಕ ನಿರೀಕ್ಷಕರ ಕಛೇರಿಯಲ್ಲಿ ಪರಸ್ಪರ ಒಪ್ಪಂದವಾಗಿ ಇತ್ಯರ್ಥವಾಗಿದೆ. ಕಾರ್ಮಿಕ ಪ್ರತಿನಿಧಿಗಳಾಗಿ ಸೌತ್‌ಕೆನರಾ ಟೈಲ್‌ವರ್ಕರ್ಸ್ ಯೂನಿಯನ್ನಿನ ಅಧ್ಯಕ್ಷರಾದ ಕಾಂ. ಪಿ. ರಾಮಚಂದ್ರರಾವ್, ಉಪಾಧ್ಯಕ್ಷರಾದ ಕೆ.ಮೂಸಬ್ಬ ಮತ್ತು ಇತರರು ಭಾಗವಹಿಸಿದ್ದರು.

ಈ ಒಪ್ಪಂದದ ಪ್ರಕಾರ ಕೆಲಸದಿಂದ ವಜಾಗೊಂಡ ಶ್ರೀ. ಕೊರಗ ಮತ್ತು ಶ್ರೀ. ಶೀನ ಎಂಬಿಬ್ಬರು ಕೆಲಸಗಾರರನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಲಾಯಿತು. ಅಂತೆಯೇ ಹೆಚ್ಚಿನ ಪ್ರಮಾಣದಲ್ಲಿ ಹೆಚ್ಚಿನ ಪರಿಹಾರ ಕಾರ್ಮಿಕರಿಗೆ ಸಿಗುವಂತಾಯಿತು. ಕೆಲವು ಕೇಳಿಕೆಗಳಿಗೆ ಸಂಬಂಧಪಟ್ಟು ಈ ಹಿಂದೆ 2 ತಿಂಗಳು ಮತ್ತು 8 ದಿವಸ ಮುಷ್ಕರ ನಡೆದಿತ್ತು.

ಸಂಪಾದಕೀಯ

[ಹಿಂದಿನ ಪುಟದಿಂದ]

ಗಳಿಂದ ಬಡತನ ಹೆಚ್ಚಾಗಿದೆ. ಶೇಕಡ 50ರಷ್ಟು ಜನತೆ ಬಡತನದ ರೇಖೆಗಿಂತ ಕೆಳಗಿದ್ದಾರೆಂದು ಅಂದಾಜುಮಾಡಲಾಗಿದೆ. ವಸತಿಯ ಅಭಾವ ಸಾರ್ವತ್ರಿಕವಾಗಿದೆ. ಶಿಕ್ಷಣವೂ ಬಹು ಸಂಖ್ಯಾತ ಜನತೆಗೆ ದೊರೆಯುತ್ತಿಲ್ಲ.

ಇದೇ ಸಂದರ್ಭದಲ್ಲಿ ದೊಡ್ಡ ಬಂಡವಾಳಶಾಹಿಗಳು ಇನ್ನೂ ದೊಡ್ಡ ಬಂಡವಾಳಶಾಹಿಗಳಾಗಿದ್ದಾರೆ, ಶ್ರೀಮಂತರು ಇನ್ನೂ ಹೆಚ್ಚು ಶ್ರೀಮಂತರಾಗಿದ್ದಾರೆ. ಬಡವರು ಇನ್ನೂ ಹೆಚ್ಚು ಬಡವರಾಗಿದ್ದಾರೆ. ಇದಕ್ಕೆ ಕಾರಣವೇನೆಂದರೆ ಆಳುವ ವರ್ಗಗಳು ಬಂಡವಾಳಶಾಹಿ ಪಥದಲ್ಲಿ ಮುಂದುವರಿಯುವ ಧೋರಣೆಯನ್ನನುಸರಿಸುವುದಾಗಿದೆ. ಇದರಲ್ಲಿ ಬದಲಾವಣೆಯಾಗದೆ, ಗುತ್ತೇದಾರಿಗಳ ಕಪಿಮುಷ್ಟಿಯಿಂದ ನಮ್ಮ ಆರ್ಥಿಕ ವ್ಯವಸ್ಥೆಯನ್ನು ಬಿಡುಗಡೆಮಾಡದೆ ನಮ್ಮ ಪ್ರಗತಿ ಸಾಧ್ಯವಿಲ್ಲ.

ಗ್ರಾಮಾಂತರ ಪ್ರದೇಶದಲ್ಲಿ ಪರಿಸ್ಥಿತಿ ಇನ್ನೂ ಶೋಚನೀಯವಾಗಿದೆ. ಬಡರೈತರು ಮತ್ತು ಕೃಷಿ ಕೆಲಸಗಾರರು ನರಕಯಾತನೆಯನ್ನನುಭವಿಸುತ್ತಿದ್ದಾರೆ. ಸರಕಾರ ಕೈಗೊಂಡ ಭೂಸುಧಾರಣಾ ಕ್ರಮಗಳಿಂದ ಭೂಮಾಲೀಕರು ಇನ್ನೂ ಬಲಿಷ್ಟರಾಗಿದ್ದಾರೆ. ರೈತರು ಬೆಳೆದ ಬೆಳೆಗಳಿಗೆ ನ್ಯಾಯ ಬೆಲೆ ಸಿಗದೆ ಅವರು ದೊಡ್ಡ ಜಮೀನ್ದಾರರ ಮತ್ತು ಸಾಹುಕಾರರ ಹಿಡಿತದಲ್ಲಿ ಸಿಕ್ಕಿ ನರಳುತ್ತಿದ್ದಾರೆ. ಈ ಪರಿಸ್ಥಿತಿಯನ್ನು ಹೋಗಲಾಡಿಸಬೇಕಾದರೆ, ನಿಜವಾದ ಭೂಸುಧಾರಣೆ ಜಾರಿಗೆ ಬರಬೇಕು. ಉಳುವವನಿಗೆ ಜಮೀನು ಸಿಗಬೇಕು. ಉಳಿತಾಯ ಜಮೀನನ್ನು ಕೃಷಿ ಕೆಲಸಗಾರರಿಗೂ ಬಡರೈತರಿಗೂ ಹಂಚಬೇಕಾಗಿದೆ. ನಿಜವಾದ ರೈತ ಕ್ರಾಂತಿಯಾಗಬೇಕು.

ಸ್ವಾತಂತ್ರ್ಯ ಬಂದಮೇಲೂ ನಮ್ಮ ಸಮಾಜದಲ್ಲಿರುವ ಹರಿಜನ-ಗಿರಿಜನ ಮತ್ತಿತರ ಹಿಂದುಳಿದ ಜನಾಂಗದವರ ಸ್ಥಿತಿ ಸುಧಾರಣೆಯಾಗಿಲ್ಲ. ಅವರ ಆರ್ಥಿಕ-ಸಾಮಾಜಿಕ ಶೋಷಣೆ ಮುಂದುವರಿದಿದೆ. ಅನೇಕ ಕಡೆ ಅವರ ಮೇಲೆ ಧಾಳಿ ನಡೆಸಲಾಗುತ್ತಿದೆ. ನೂರಾರು ಜನರನ್ನು ಕೊಲೆ ಮಾಡಲಾಗಿದೆ. ಈ ಅನ್ಯಾಯ ಅತ್ಯಾಚಾರವನ್ನು ನಿಲ್ಲಿಸದೆ ನಾವು ಮುಂದುವರಿಯಲು ಸಾಧ್ಯವಿಲ್ಲ.

ಈ ಪರಿಸ್ಥಿತಿಯ ವಿರುದ್ಧ ಜನ ಹೋರಾಟ ನಡೆಸಿಕೊಂಡು ಬಂದಿದೆ. ಕಾರ್ಮಿಕರೂ, ರೈತರೂ, ವಿದ್ಯಾರ್ಥಿಗಳೂ ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಐಕ್ಯಹೋರಾಟಗಳನ್ನು ನಡೆಸುತ್ತಿರುವುದು ಶುಭ ಸೂಚನೆಯಾಗಿದೆ. ಈ ಹೋರಾಟಗಳಿಗೆ ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡರಂಗದ ಸರಕಾರಗಳು ಸ್ಫೂರ್ತಿನೀಡುತ್ತಿವೆ.

ಈಗ ನಮ್ಮ ದೇಶದಲ್ಲಿ ಆರ್ಥಿಕ ಬಿಕ್ಕಟ್ಟು ದಿನೇ ದಿನೇ ಆಳವಾಗುತ್ತಿದೆ. ಅದು ನಮ್ಮ ಜೀವನದ ಎಲ್ಲ ಕ್ಷೇತ್ರಗಳನ್ನೂ ಆವರಿಸಿದೆ. ಇದರ ಪರಿಣಾಮವಾಗಿ ನಮ್ಮನ್ನಾಳುವ ಬಂಡವಾಳಶಾಹಿ-ಜಮೀನ್ದಾರಿ ಪಕ್ಷಗಳಲ್ಲಿ ತೀವ್ರ ಬಿಕ್ಕಟ್ಟು ತಲೆದೋರಿದೆ. ಈಗ ಕೇಂದ್ರದಲ್ಲೂ ಅಭದ್ರತೆ ಮತ್ತು ಅನಿಶ್ಚಿತತೆ ತಲೆಯೆತ್ತಿದೆ.

ಈ ಹಿನ್ನೆಲೆಯಲ್ಲಿ ಈ ವರ್ಷದ ಸ್ವಾತಂತ್ರ್ಯ ದಿನೋತ್ಸವಕ್ಕೆ ಹೆಚ್ಚಿನ ಮಹತ್ವವಿದೆ. ನಮ್ಮ ದೇಶದ ಎಲ್ಲ ಪ್ರಜಾಪ್ರಭುತ್ವವಾದಿಗಳೂ ಎಡ ಪಕ್ಷಗಳೂ ಒಂದುಗೂಡಿ ನಮ್ಮ ಪ್ರಜಾಪ್ರಭುತ್ವವನ್ನು ರಕ್ಷಿಸಲು; ಜಾತೀಯವಾದಿಗಳನ್ನೂ, ಸರ್ವಾಧಿಕಾರಿ ಶಕ್ತಿಗಳನ್ನೂ ಎದುರಿಸಲು ಎಚ್ಚರಿಕೆಯಿಂದ ಹೋರಾಡಬೇಕಾಗಿದೆ.

ಕಾರ್ಮಿಕರೂ, ರೈತರೂ, ವಿದ್ಯಾರ್ಥಿಗಳೂ, ಯುವಕರೂ ಎಲ್ಲರೂ ಒಂದಾಗಿ ಬಲಿಷ್ಟ ಸಂಘಟನೆಯನ್ನು ಕಟ್ಟಿ ಸಾಮ್ರಾಜ್ಯಶಾಹಿ ವಿರೋಧಿ, ಗುತ್ತೇದಾರಿ ಬಂಡವಾಳಶಾಹಿ ಮತ್ತು ಜಮೀನ್ದಾರಿ ವಿರೋಧಿ ಹೋರಾಟಕ್ಕೆ ಮುಂದುವರಿಯುವ ಪ್ರತಿಜ್ಞೆಯನ್ನು ಈ ಸಂದರ್ಭದಲ್ಲಿ ಮಾಡಬೇಕಾಗಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಮಡಿದ ಸಹಸ್ರಾರು ಹುತಾತ್ಮರಿಗೆ ನಮ್ಮ ಶ್ರದ್ಧಾಂಜಲಿಯನ್ನರ್ಪಿಸುತ್ತಾ, ಈ ಹೋರಾಟವನ್ನು ಮುಂದುವರಿಸಿ ಸಮಾಜವಾದಿ ಸಮಾಜವನ್ನು ಸ್ಥಾಪಿಸಲು ದುಡಿಯುವ ಪ್ರತಿಜ್ಞೆಯನ್ನು ಮಾಡೋಣ.

ಎಡರಂಗ ಸರಕಾರವನ್ನು ಉರುಳಿಸಲು ಪಿತೂರಿ

[ಹಿಂದಿನ ಪುಟದಿಂದ]

ಗಳನ್ನು ತಂದಿದ್ದೇನೆ. ಅವುಗಳು ರತನ್ ಬಳಿ ಇವೆ. ನೀನು ಅವುಗಳನ್ನು ತೆಗೆದುಕೊಂಡು ಹೋಗು. ಎಲ್ಲಾ ಪತ್ರ ವ್ಯವಹಾರವನ್ನು ಅಗರ್ತಲಾದ ಅಮ್ರ ಬಂಗಾಲಿ ಕಛೇರಿ ವಿಳಾಸಕ್ಕೆ ಬರೆಯುವುದು".

ಬಂದ್ ಕರೆ ವಿಫಲ:

ಮೇಲ್ಕಾಣಿಸಿದ ಪತ್ರಗಳನ್ನು ಓದಿದರೆ, ಆನಂದಮಾರ್ಗ ಮತ್ತು ಅಮ್ರಬಂಗಾಲಿ ಸಂಘಟನೆಗಳ ನಿಜವಾದ ಸ್ವರೂಪ ಏನೆಂಬುದು ಸ್ಪಷ್ಟವಾಗುತ್ತದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡರಂಗ ಸರಕಾರ ಅಧಿಕಾರಕ್ಕೆ ಬಂದಮೇಲೆ, ಹರಿಜನ-ಗಿರಿಜನರಿಗಾಗಿ ಹಾಗೂ ಜನಸಾಮಾನ್ಯರ ಹಿತಕ್ಕಾಗಿ ತೆಗೆದುಕೊಂಡ ಕ್ರಮಗಳು, ಸ್ಥಳೀಯ ಬಂಡವಾಳಗಾರರಿಗೆ ಸಹಿಸದಾಗಿದೆ. ಆದ್ದರಿಂದ ಭಾಷೆ, ಪ್ರಾಂತೀಯತೆ ಮುಂತಾದ ಸಂಕುಚಿತ ಭಾವನೆಗಳನ್ನು ಹರಡುವುದರ ಮೂಲಕ ರಾಜ್ಯದಲ್ಲಿ ಅಶಾಂತಿ ಹರಡಲು ಪ್ರತಿಗಾಮಿ ಶಕ್ತಿಗಳೆಲ್ಲವೂ ಒಂದಾಗಿವೆ. ತಮ್ಮ ಶಕ್ತಿಯನ್ನು ಪ್ರದರ್ಶಿಸಲು, ಜುಲೈ 16 ರಂದು 24 ಗಂಟೆಗಳ ಬಂದ್ ರಾಜ್ಯಾದಂತ ಆಚರಿಸಲು ಅಮ್ರಬಂಗಾಲಿ ಕರೆಕೊಟ್ಟಿತ್ತು. ಈ ಛಿದ್ರಕಾರಿ ಶಕ್ತಿಗಳಿಗೆ ಹಣಸಹಾಯ ನೀಡುವ ದೊಡ್ಡ ಉದ್ಯಮಿಗಳು, ಜನತೆಯಿಂದ ದೂರವಾಗಿರುವ ರಾಜಕೀಯ ಪಕ್ಷಗಳು ಹಾಗೂ ಜಾತೀಯವಾದಿಗಳು ಮಾತ್ರ ಅದನ್ನು ಬೆಂಬಲಿಸಿದವು. ಬಂದನ್ನು ಯಶಸ್ವಿಗೊಳಿಸಲು ಆನಂದಮಾರ್ಗಿಗಳು, ಬಾಂಬ್ ಎಸೆಯುವುದು, ರಸ್ತೆಯನ್ನು ಅಡ್ಡಗಟ್ಟುವುದು, ಸರಕಾರಿ ನೌಕರರಿಗೆ ಹೊಡೆಯುವುದು, ವಾಹನಗಳಿಗೆ ಬೆಂಕಿ ಇಡುವುದು ಮುಂತಾದ ಭಯೋತ್ಪಾದಕ ಕೃತ್ಯಗಳನ್ನು ನಡೆಸಿದರು.

ಇಷ್ಟಾದರೂ, ಶಾಲಾ, ಕಾಲೇಜುಗಳು, ರಾಜ್ಯ-ಕೇಂದ್ರ ಕಛೇರಿಗಳು, ಸಂಪರ್ಕ ಕೇಂದ್ರಗಳು, ರಸ್ತೆಸಾರಿಗೆ, ವಿಮಾನ, ಮತ್ತು ಕಾರ್ಖಾನೆಗಳು ಎಂದಿನಂತೆ ಕೆಲಸ ಮಾಡಿದವು. ಕೆಲವು ಆಸಕ್ತ ವಾಣಿಜ್ಯ ಮಳಿಗೆಗಳು ಮಾತ್ರ ತೆರೆಯಲಿಲ್ಲ.

ಎರಡು ತಿಂಗಳ ಹಿಂದೆ ರಾಜ್ಯದ ಇನ್‌ಸ್ಪೆಕ್ಟರ್ ಜನರಲ್‌ರವರಿಗೆ, ಅಮ್ರ ಬಂಗಾಲಿ ಸಂಸ್ಥೆಯ ನಾಯಕರು ಪತ್ರ ಬರೆದು, ಸರಕಾರವನ್ನು ಉರುಳಿಸಲು ತಾವು ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳುವುದಾಗಿ ತಿಳಿಸಿದ್ದರು. ಇದಾದ ನಂತರ, ರಾಜ್ಯದಲ್ಲಿ ಅಲ್ಲಲ್ಲಿ ಬಂದ್ ನಡೆಸುವುದು, ಶಾಲೆ, ಸೇತುವೆಗಳನ್ನು ಹಾಳು ಮಾಡುವುದು, ಎಡರಂಗ ಸರಕಾರದ ಬೆಂಬಲಿಗರನ್ನು ಕೊಲೆ ಮಾಡುವುದು, ಪೋಲೀಸರ ಮೇಲೆ ಹಲ್ಲೆ ಮಾಡುವುದು ಸತತವಾಗಿ ನಡೆದಿದೆ.

ಆನಂದಮಾರ್ಗ, ಅಮ್ರಬಂಗಾಲಿಗಳ ಈ ಫ್ಯಾಸಿಸ್ಟ್ ಯೋಜನೆಗಳಿಗೆ ಕಾಂಗ್ರೆಸ್ ಮತ್ತು ಜನತಾಪಕ್ಷಗಳು ಬೆಂಬಲ ನೀಡುತ್ತಿವೆ.

ಎಡ ಮತ್ತು ಪ್ರಜಾಸತ್ತಾತ್ಮಕ ರಂಗಕ್ಕೆ ಸೇರಿದ ಎಲ್ಲಾ ರಾಜಕೀಯ ಪಕ್ಷಗಳು ಹಾಗೂ ಅವುಗಳ ಸಾಮೂಹಿಕ ಸಂಘಟನೆಗಳು ವಾರವಿಡೀ ರಾಜ್ಯಾದ್ಯಂತ ರಾಜಕೀಯ ಪ್ರಚಾರ ನಡೆಸಿ, ಆನಂದಮಾರ್ಗ ಮತ್ತು ಅಮ್ರಬಂಗಾಲಿಗಳ ನಿಜವಾದ ಉದ್ದೇಶವನ್ನು ಜನಗಳಿಗೆ ಮನವರಿಕೆ ಮಾಡಿಕೊಟ್ಟರು. ಸಿ.ಪಿ.ಐ. ಮತ್ತು ನಕ್ಸಲವಾದಿಗಳೂ ಬಂದನ್ನು ವಿರೋಧಿಸಿ ಬೀದಿಗಿಳಿದವು. ಇಡೀ ರಾಜ್ಯದಲ್ಲಿ ಸರಕಾರದ ಕಾರ್ಯಕ್ರಮಗಳನ್ನು ಬೆಂಬಲಿಸಿ ನೂರಾರು ಮೆರವಣಿಗೆಗಳು, ಸಭೆಗಳು ನಡೆದವು. ಒಂದೂವರೆ ಲಕ್ಷಕ್ಕೂ ಹೆಚ್ಚು ಜನ ಈ ಪ್ರದರ್ಶನಗಳಲ್ಲಿ ಭಾಗವಹಿಸಿ, ಪ್ರತಿಗಾಮಿ ಶಕ್ತಿಗಳಿಗೆ ತಕ್ಕ ಉತ್ತರ ನೀಡಿದರು. ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ ಹಾಗೂ ಎಡರಂಗ ಸಮಿತಿಯ ಅಧ್ಯಕ್ಷ ಭಾನುಘೋಷ್ ಇವರುಗಳು, ಪ್ರತಿಗಾಮಿ ಶಕ್ತಿಗಳ ಪಿತೂರಿಯನ್ನು ವಿಫಲಗೊಳಿಸಿದಕ್ಕಾಗಿ ಜನತೆಯನ್ನು ಅಭಿನಂದಿಸಿದ್ದಾರೆ.

ತ್ರಿಪುರಾ ರಾಜ್ಯ ಸರಕಾರ ಪ್ರಣವ ಬಾಬು ಬರೆದಿರುವ ಪತ್ರಗಳ ಬಗ್ಗೆ ತನಿಖೆ ನಡೆಸುತ್ತಿದೆ. ಆದರೆ, ಇಂಥ ಫ್ಯಾಸಿಸ್ಟ್, ಅರೆ-ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಕೇವಲ ಸರಕಾರದ ಕ್ರಮ ಸಾಲದು, ಜನತೆಯನ್ನು ರಾಜಕೀಯ ಪ್ರಚಾರದ ಮೂಲಕ ಸಂಘಟಿಸಬೇಕು ಹಾಗೂ ತಿಳುವಳಿಕೆ ನೀಡಬೇಕು. ಇದು ತ್ರಿಪುರಾ ಘಟನೆಗಳಿಂದ ಮತ್ತಷ್ಟು ಸ್ಪಷ್ಟವಾಗಿದೆ. ○

ಪರಿಸರ

ಇಂದಿರಾಗಾಂಧಿ ಮಾಡಿರುವ ಅಪರಾಧಗಳ ಎದುರು ಅಮೆರಿಕೆಯ ಮಾಜೀ ಅಧ್ಯಕ್ಷ ನಿಕ್ಸನ್ ಅವರ ಅಪರಾಧಗಳು ಏನೂ ಇಲ್ಲ. ಆದರೆ ಇಂದು ಅಮೆರಿಕೆಯಲ್ಲಿ ನಿಕ್ಸನ್ ಅವರ ಹೆಸರನ್ನು ಹೇಳುವವರು ಒಬ್ಬರೂ ಇಲ್ಲ. ಭಾರತದಲ್ಲಿ ಇಂದಿರಾಗಾಂಧಿಯವರನ್ನು ತಲೆಯ ಮೇಲೆ ಹೊತ್ತು ಕುಣಿಯುವ ಜನ ಬಹಳ ಇದ್ದಾರೆ.

—"ಪ್ರಪಂಚ"ದಲ್ಲಿ ಪಾಟೀಲ್‌ಪುಟ್ಟಪ್ಪ

ಈ ದೇಶದ ಸ್ವಾತಂತ್ರ್ಯಕ್ಕಾಗಿ ಆರ್. ಎಸ್. ಎಸ್. ನವರು ಹೋರಾಟ ಮಾಡುವುದಿರಲಿ ಸ್ವಾತಂತ್ರ್ಯದ ಪರವಾಗಿ ಅವರು ಅಂಗೀಕರಿಸಿದ ನಿರ್ಣಯದ ಒಂದೇ ಒಂದು ಉದಹರಣೆಯನ್ನಾದರೂ ತೋರಿಸಿ-ನಾನು ಆರ್. ಎಸ್. ಎಸ್. ಸೇರುತ್ತೇನೆ.

—ಹೆಚ್. ಎನ್. ಬಹುಗುಣ
(ಕೇಂದ್ರ ಹಣಕಾಸು ಸಚಿವ)

ಜಗಜೀವನರಾಮ್ ಅವರು ಗಂಭೀರವಾಗಿದ್ದುಕೊಂಡು ಚರಣ್ ನೇತೃತ್ವದ ಸರ್ಕಾರಕ್ಕೆ ಈಗ ಬೆಂಬಲಕೊಡಬೇಕು. ಇಲ್ಲದಿದ್ದರೆ ನಾನು ಅವರ ವಿರುದ್ಧ ದರ್ಮಯುದ್ಧ ಸಾರುತ್ತೇನೆ. ಜಗ್ವಾರ್ ವ್ಯವಹಾರದಲ್ಲಿ ಅವರು 20-25 ಕೋಟಿ ರೂ. ಗಳ ಹಣ ಮಾಡಿಕೊಂಡಿರುವ ಎಲ್ಲ ದಾಖಲೆ ಪತ್ರಗಳೂ ನನ್ನಲ್ಲಿವೆ.

—ರಾಜ್‌ನಾರಾಯೆಣ್

ನಾನು ಈ ಸರ್ಕಾರದ ಯಾವುದೇ ಮಂತ್ರಿಯ ಹೇಳಿಕೆಯನ್ನು ಒಪ್ಪುವುದಿಲ್ಲ. ಯಾಕೆಂದರೆ ಅವರು ಹೇಗೆ ಹೇಗೆಯೋ ಮಂತ್ರಿಗಳಾಗಿದ್ದಾರೆ.

—ಚಂದ್ರಶೇಖರ್
(ಜನತಾಪಕ್ಷದ ಅಧ್ಯಕ್ಷ)

ಇಂದು ಸಂಸ್ಕೃತ ಭಾಷೆಗೆ ಇರುವುದು ಬರೀ ಮ್ಯೂಜಿಯಂ ಮೌಲ್ಯ.

—ಚಂದ್ರಶೇಖರ ಪಾಟೀಲ
(ಖ್ಯಾತ ಸಾಹಿತಿ)

ಈ ದೇಶದ ರೈತರ ಭೂಮಿಯು ಹರಾಜಿಗೆ ಬಂದಿದೆ ಎಂದರೆ ಅವರ ಸ್ಥಿತಿಯ ಬಗ್ಗೆ ವಿವರಣೆ ಯಾಕೆಬೇಕು ?

"ಪ್ರಪಂಚ"ದಲ್ಲಿ ಪಾಟೀಲ್‌ಪುಟ್ಟಪ್ಪ

ಶಿಡ್ಲಘಟ್ಟ ಬಂದ್

ಕೋಲಾರ ಜಿಲ್ಲಾ ಶಿಡ್ಲಘಟ್ಟ ತಾಲೂಕಿನ ಮೂಲಕ ಹಾದುಹೋಗುವ, ಬೆಂಗಳೂರು ಬಂಗಾರಪೇಟೆ ನಡುವಿನ ನ್ಯಾರೋಗೇಜ್ ರೈಲು ಮಾರ್ಗವನ್ನು ರದ್ದುಗೊಳಿಸುವ, ಕೇಂದ್ರ ರೈಲ್ವೆ ಖಾತೆಯ ನಿರ್ಧಾರವನ್ನು ಪ್ರತಿಭಟಿಸಿ ಜುಲೈ 31 ರಂದು ನಡೆಸಿದ ಶಿಡ್ಲಘಟ್ಟ ಬಂದ್ ಸಂಪೂರ್ಣ ಯಶಸ್ವಿಯಾಯಿತು.

ಬಂದ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರು, ಬುದ್ಧಿಜೀವಿಗಳು, ಕಾರ್ಮಿಕರು ಹಾಗೂ ವಿದ್ಯಾರ್ಥಿಗಳು ಪ್ರಮುಖ ಪಾತ್ರವಹಿಸಿದ್ದರು. ಈ ಕಾರ್ಯಕ್ರಮದ ಚಟುವಟಿಕೆಗಳನ್ನು ನಡೆಸಲು ಸರ್ವಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ ನಾಗರೀಕ ಕ್ರಿಯಾ ಸಮಿತಿಯನ್ನು ಕೆಳಕಂಡಂತೆ ರಚಿಸಲಾಗಿತ್ತು :

1) ಬಿ. ಕೆ. ನಾರಾಯಣಸ್ವಾಮಿ ಅಧ್ಯಕ್ಷರು,
2) ಜಿ. ದೊರೆಸ್ವಾಮಿ ಉಪಾಧ್ಯಕ್ಷರು,
3) ಬಿ. ಮೊಹಿದೀನ್ ಷರೀಫ್ ಉಪಾಧ್ಯಕ್ಷರು,
4) ಪಿ. ನಾರಾಯಣಸ್ವಾಮಿ ಉಪಾಧ್ಯಕ್ಷರು,
5) ರಾಧಾಕೃಷ್ಣಶೆಟ್ಟಿ ಕಾರ್ಯದರ್ಶಿ,
6) ಮುನಿಕೃಷ್ಣಪ್ಪ ಕಾರ್ಯದರ್ಶಿ,
7) ಖಂಡೇರಾವ್ ಖಜಾಂಚಿ.

ಇದರೊಂದಿಗೆ ಇಪ್ಪತ್ತು ಜನರ ಸಮಿತಿಯನ್ನು ರಚಿಸಲಾಗಿತ್ತು.

ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಕ್ರಿಯಾಸಮಿತಿಯ ಮುಖಂಡರು, ಈಗಿರುವ ನ್ಯಾರೋಗೇಜ್ ರೈಲುಮಾರ್ಗವನ್ನು ಮೀಟರ್‌ಗೇಜ್ ಮಾಡಲು ಕೇಂದ್ರ ಸರಕಾರವನ್ನು ಒತ್ತಾಯಿಸಿದರು. ಕೊನೆಯಲ್ಲಿ ಕಾಂ. ಎನ್. ಮಣಿಯವರು ವಂದನಾರ್ಪಣೆ ಮಾಡಿದರು. ○

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT